ಐಕ್ಯರಂಗ

ಪಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 | ಸಂಚಿಕೆ 10 | ಮಾರ್ಚ್ 9, 1986 | ಬೆಲೆ 60 ಪೈಸೆ

ಒಳಗೇನಿದೆ....

500 ರೂ. ಕನಿಷ್ಠ ಕೂಲಿಗಾಗಿ ಒತ್ತಾಯಿಸಿ

ಅಸಂಘಟಿತ ಕಾರ್ಮಿಕರ ಅತ್ಯಪೂರ್ವ ಪ್ರದರ್ಶನ

ಮಾರ್ಚ್ 3, 1986 ಕರ್ನಾಟಕದ ಕಾರ್ಮಿಕರ ಚರಿತ್ರೆಯಲ್ಲಿ ಒಂದು ಚಿರಸ್ಮರಣೀಯ ದಿನ ಕರ್ನಾಟಕದ ಮೂಲೆ ಮೂಲೆಗಳಿಂದ ಕನಿಷ್ಠ ಕೂಲಿ ಅನ್ವಯವಾಗುವ 27 ಕೈಗಾರಿಕೆಗಳ 1 ಕೋಟಿ ಬಡ ಕಾರ್ಮಿಕರ ಪ್ರತಿನಿಧಿಗಳಾಗಿ 10 ಸಾವಿರಕ್ಕೂ ಅಧಿಕ ಮಂದಿ ಕಾರ್ಮಿಕರು ಬೆಂಗಳೂರಿಗೆ ಬಂದು ಪ್ರದರ್ಶನ ಮಾಡಿದರು. ಸಿಲ್ವರ್ ಜುಬಿಲಿ ಪಾರ್ಕಿನಿಂದ ಸರಿಯಾಗಿ 1 ಗಂಟೆಗೆ ಹೊರಟ ಮೆರವಣಿಗೆಯ ತುದಿ ಮತ್ತು ಕೊನೆ ಪರಸ್ಪರ ತೋರುತ್ತಿರಲಿಲ್ಲ. ಸುಮಾರು 35 ನಿಮಿಷ ಕಾಲ ವಾಹನವನ್ನು ತಡೆದ ಬೃಹತ್ ಮೆರವಣಿಗೆಯು ಮುಖ್ಯ ಬೀದಿಗಳಲ್ಲಿ ಸುತ್ತಾಡಿ 3 ಗಂಟೆಗೆ ಸರಿಯಾಗಿ ಕಬ್ಬನ್ ಪಾರ್ಕಿಗೆ ಸೇರಿತು.

3 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಸ್ತ್ರೀಯರು ಭಾಗವಹಿಸಿದ್ದು ಉಲ್ಲೇಖನೀಯ. ಮಕ್ಕಳನ್ನು ಹೊತ್ತು ಉರಿ ಬಿಸಿಲಿನಲ್ಲಿ ಘೋಷಣೆ ಹಾಕುತ್ತಾ ನಡೆಯುತ್ತಿದ್ದ ಆ ದೃಶ್ಯ ಚಿರಸ್ಮರಣೀಯ ವಿವಿಧ ಜಿಲ್ಲೆಗಳ ವಿಶಿಷ್ಟ ವೇಷ ಭೂಷಣಗಳಿಂದ ಕೂಡಿದ ಮೆರವಣಿಗೆಯು ಆಕರ್ಷಕವಾಗಿತ್ತು. ಸಾವಿರಾರು ಕೆಂಪು ಧ್ವಜಗಳಿಂದಲೂ, ಬ್ಯಾನರ್‌ಗಳಿಂದಲೂ ಕೂಡಿತ್ತು. ಬೀದಿಗಳಲ್ಲಿ ಇಡಿಯಾಗಿ ಪ್ರದರ್ಶನಕಾರರೇ ತುಂಬಿದಂತೆ ತೋರುತ್ತಿತ್ತು.

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಶಾಸಕರು ಮತ್ತು ಕೆ. ಜಿ. ಎಫ್.ನ ಸಿ. ಐ. ಟಿ ಯು. ಮುಖಂಡರಾದ ಕಾಂ|| ಟಿ. ಎಸ್. ಮಣಿಯವರು ಸದನದಲ್ಲಿ ಶ್ರೀ ರಾಮಕೃಷ್ಣ ಹೆಗ್ಡೆಯವರ ಜತೆ ಈ ವಿಷಯದ ಕುರಿತು ಮಾತುಕತೆ ನಡೆಸಿದಾಗ, ಅವರು ಕಾರ್ಮಿಕ ಮಂತ್ರಿ ಶ್ರೀ ಮಂಜುನಾಥರವರನ್ನು ಸಾರ್ವಜನಿಕ ಸಭೆಗೆ ಕಳುಹಿಸಿಕೊಟ್ಟರು.

ಸಭೆಯು ಸುಮಾರು 4–30 ಕ್ಕೆ ಆರಂಭವಾಯಿತು. ಕಾಂ| ಎಸ್. ಸೂರ್ಯನಾರಾಯಣರಾಯರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ವೇದಿಕೆಯ ಮೇಲೆ ಶ್ರೀಮಾನ್ ಮಂಜುನಾಥ್ ಇವರಲ್ಲದೆ ಸಿ. ಐ. ಟಿ. ಯು. ಮುಖಂಡರುಗಳಾದ ಕಾಂ| ಸಿ. ನಂಜುಂಡಪ್ಪ, ವಿ ಜೆ ಕೆ ನಾಯರ್, ಗೋಪಾಲ ಗೌಡ, ಪಿ. ರಾಮಚಂದ್ರರಾವ್, ಛೀಮಸಿಕಲಾಡಗಿ ಮೊದಲಾದವರು ಉಪಸ್ಥಿತರಿದ್ದರು.

ಕಾಂ|| ವಿ. ಜೆ. ಕೆ. ಯವರು ಸಭಿಕರನ್ನು, ಮಂತ್ರಿಗಳನ್ನೂ ಆಮಂತ್ರಿಸಿ "ಒಂದು ದಶಕ ಕಾಲದಿಂದಲೂ ಕನಿಷ್ಠ ಕೂಲಿಯಿಂದ ವಂಚಿತರಾಗಿರುವ ಕರ್ನಾಟಕದ ಜನತೆಯ ನಾಲ್ಕರಲ್ಲಿ 1 ಭಾಗ

ಒತ್ತಾಯಗಳು

1. ತಿಂಗಳಿಗೆ 500 ರೂ ಕನಿಷ್ಟ ಕೂಲಿ
2. ಪ್ರತಿಪಾಯಿಂಟಿಗೆ ರೂ 1.30 ತುಟ್ಟಿಭತ್ಯ
3. ಹನ್ನೆರಡು ತಿಂಗಳೂ ಕೆಲಸ

ಇದೀಗ, ತಾಳ್ಮೆಗೆಡುವ ಪರಿಸ್ಥಿತಿಗೆ ಬಂದಿವೆ ಸರಕಾರದವರೊ–ಅದೂ ಅವರೇ ಮತಕೊಟ್ಟು, ಅಧಿಕಾರಕ್ಕೆ ತಂದ ಜನತಾ ಸರಕಾರವು ಕೂಡಾ ಈ ವಿಷಯದಲ್ಲಿ ಮೀನ–ಮೇಷ ಮಾಡುತ್ತಿರುವುದು ತೀರಾ ಬೇಜವಾಬ್ದಾರಿ. ಕಾರ್ಮಿಕ ಮಂತ್ರಿಗಳು ಸರಿಯಾದ ಭರವಸೆ ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸದಿದ್ದರೆ ರಾಜ್ಯದಾದ್ಯಂತ ಪ್ರಭಾವಯುತ ಚಳವಳಿಯನ್ನು ಎದುರಿಸಬೇಕಾದೀತು ಎಂದು ಎಚ್ಚರಿಸಿದರು.

ಅಧ್ಯಕ್ಷ ಸ್ಥಾನ ವಹಿಸಿದ್ದ ಕಾ ಎಸ್ ಸೂರ್ಯನಾರಾಯಣರಾಯರು ಮಾತನಾಡುತ್ತಾ "ರಾಜ್ಯದ ಕನಿಷ್ಟ ಕೂಲಿ ಸಲಹಾ ಸಮಿತಿ 27 ಕೈಗಾರಿಕೆಗಳ ಕುರಿತು ಕನಿಷ್ಟ ಕೂಲಿಯ ಬಗ್ಗೆ ಶಿಫಾರಸು ಕೊಟ್ಟು ಹಲವು ತಿಂಗಳುಗಳಾದರೂ ಅದೂ ಹೈಕೋರ್ಟಿನ ಹಿಂದಿನ ಪ್ರಕಟಣೆಗಳನ್ನು ತಳ್ಳಿಹಾಕಿ ಅನ್ಯಾಯವೆಸಗಿದಾಗ ಸರಕಾರವು ಇನ್ನೂ ಪ್ರಕಟಣೆಗೆ ತಡೆ ಮಾಡುತ್ತಿರುವುದು ಅಸಹನೀಯ. ಅದರಲ್ಲೂ ಕಾರ್ಮಿಕ ಪ್ರತಿನಿಧಿಗಳು ಒಕ್ಕೊರಲಿನಿಂದ ಕೊಟ್ಟ ಸಲಹೆಗಳ ಪ್ರಕಾರ ಕನಿಷ್ಟ ಕೂಲಿ

ಪಿ. ರಾಮಚಂದ್ರರಾವ್

ಪ್ರಕಟಿಸದೆ ಹಿಂದೆ ಶ್ರೀಮಾನ್ ಅಜೀಜ್‌ಸೇಟ್ ಮಾಡಿದಂತೆ ಅಸಂಬದ್ಧ ರೀತಿಯಲ್ಲಿ ಮಧ್ಯಪ್ರವೇಶ ಮಾಡಿದರೆ, ರಾಜ್ಯದ ಕೂಲಿ ಕಾರ್ಮಿಕರು ಸಹಿಸಲಾರರು" ಎಂದು ಗುಡುಗಿದರು.

ಸಿ ಐ ಟಿ ಯು ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು "ಕನಿಷ್ಟ ಕೂಲಿ ಕಾನೂನಿಗೊಳಗಾದ ಕಾರ್ಮಿಕರ ಕಷ್ಟಕಾರ್ಪಣ್ಯಗಳನ್ನು ವಿವರಿಸಿರುವ ಮತ್ತು ಹೇಗೆ ಅವರು ಸಂವಿಧಾನದ ಸ್ಪಷ್ಟ ನಿರ್ದೇಶನಗಳಿದ್ದಾಗ್ಯೂ ವಂಚಿತರಾಗಿರುತ್ತಾರೆ" ಎಂಬುದನ್ನು ವಿಶದೀಕರಿಸಿರುವ ಸರಕಾರದ ಮುಂದೆ ಕೆಲವು ಬೇಡಿಕೆಗಳನ್ನಿಟ್ಟ ಮನವಿ,,ಯನ್ನು ಓದಿದರು ಮತ್ತು ಪಶ್ಚಿಮ ಬಂಗಾಳ ಹಾಗೂ ತ್ರಿಪುರ ರಾಜ್ಯಗಳ ಎಡರಂಗದ ಸರಕಾರಗಳ ಕಾರ್ಮಿಕ ಮಂತ್ರಿಗಳು ಕಾರ್ಮಿಕರ ಬಗ್ಗೆ ವರ್ತಿಸುವ ರೀತಿ ವಿಧಾನಗಳನ್ನು ತಿಳಿದುಕೊಂಡು ನಮ್ಮ ರಾಜ್ಯದ ಕಾಂಗ್ರೆಸ್ಸೇತರ ಸರಕಾರದ ಮಂತ್ರಿಗಳು ನಡೆಯ

[8ನೇ ಪುಟ ನೋಡಿ]

ಪ್ರಧಾನಿಯವರಿಗೆ ಮಾತೇ ಹೊರಡಲಿಲ್ಲ

ರಾಜ್ಯ ಸಭೆಯಲ್ಲಿ ರಾಜೀವ್ ಗಾಂಧಿಯವರ ಅಪಲಾಪ : ವಿರೋಧ ಪಕ್ಷಗಳ ಮಾರುತ್ತರ

ಪ್ರಧಾನಿ ರಾಜೀವ ಗಾಂಧಿಯವರು ಇತ್ತೀಚೆಗೆ ರಾಜ್ಯ ಸಭೆಯಲ್ಲಿ ರಾಷ್ಟ್ರಪತಿಗಳಿಗೆ ವಂದನೆ ಅರ್ಪಿಸುವ ಚರ್ಚೆಗೆ ಉತ್ತರ ನೀಡುವಾಗ, ವಿರೋಧ ಪಕ್ಷಗಳು ಎತ್ತಿದ ಮೂಲ ಭೂತ ಪ್ರಶ್ನೆಗಳಿಗೆ ಜವಾಬು ನೀಡುವ ಬದಲು, ಈ ಸವಾಲಿನಿಂದ ಪಾರಾ ಪಡೆಯಲು ಒಂದೂ ಕಾಲು ಗಂಟೆ ಜೀರಿ ಏನೇನೋ ಮಾತನಾಡಿ ವಿರೋಧ ಪಕ್ಷಗಳ ಮೇಲೆ, ಅದರಲ್ಲಯೂ ಸಿ.ಪಿ.ಐ. (ಎಂ) ಮೇಲೆ ಧಾಳಿ ಮಾಡಿದರು ಈ ಧಾಳಿಗೆ ವಿರೋಧ ಪಕ್ಷಗಳು, ಸಿ ಪಿ ಐ (ಎಂ) ನ ದಿನೇಶ ಘೋಷ್ ಹಾಗೂ ಫಿರೋಜ್ ಚಟರ್ಜಿ ಯವರು ಒಡೆದ ಮಾರುತ್ತರದ ಪತ್ರಿ, ಹೇಗಿತ್ತೆಂದರೆ "ಡೆಕ್ಕನ್ ಹೆರಾಲ್ಡ್" ಬರೆಯುವಂತೆ 'ರಾಜೀವ ಗಾಂಧಿಯವರು ಪ್ರಧಾನಿಯಾದ ನಂತರ ಪ್ರಥಮ ಬಾರಿಗೆ ಇಷ್ಟು ಪ್ರಮಾಣದಲ್ಲಿ ಅವರು ವಿರೋಧ ಪಕ್ಷಗಳ ಟೀಕೆಯನ್ನು ಎದುರಿಸಬೇಕಾಯಿತು. ಅವರ ಭಾಷಣದುದ್ದಕ್ಕೂ ನಿರಂತರವಾಗಿ ಅವರ ಹಾಗೂ ವಿರೋಧ ಪಕ್ಷಗಳ ನಾಯಕರ ನಡುವೆ ವಾಗ್ವಾದ ನಡೆಯುತ್ತಾ ಹೋಯಿತು' ಕೆಲವು ಘಳಿಗೆಗಳಲ್ಲಿ ಅವರನ್ನು ನಿರುತ್ತರರನ್ನಾಗಿಸಿತು.

ನಮ್ಮ ದೇಶದ ಬಂಡವಾಳಶಾಹಿ ಪತ್ರಿಕೆಗಳು ಈ ವಾಗ್ವಾದದ ಕೇವಲ ಒಂದೊಂದು ತುಣುಕನ್ನು ಮಾತ್ರ ನೀಡಿವೆ. 'ದೇಶಾಭಿಮಾನಿ'ಯಲ್ಲಿ ವರದಿಯಾದಂತೆ ಈ ವಾಗ್ಬಾಣ–ಪ್ರತಿಬಾಣಗಳ ಬಿರುಸನ್ನೂ, ಸಿ ಪಿ ಐ (ಎಂ) ನಾಯಕರ ಪ್ರತಿ ಧಾಳಿಯನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

ಕೋಮುವಾದ ಬೆಳೆಸುತ್ತಿರುವವರು ಯಾರು ?

ಪ್ರಧಾನ ಮಂತ್ರಿಯವರು ರಾಷ್ಟ್ರಪತಿ ಭಾಷಣಕ್ಕೆ ಉತ್ತರ ನೀಡುವಾಗ, ಭಾರತದ ಅತ್ಯಂತ ದೊಡ್ಡ ಬೌರ್ಬಲ್ಯ ಕೋಮುವಾದ. ಈ ಕೋಮುವಾದಕ್ಕೆ ಕಾರಣ ವಿರೋಧ ಪಕ್ಷಗಳು ಎಂದು ಆರೋಪ ಮಾಡಿದರು ಇಂಥ ಕಪಟ ಪ್ರಸಂಗವಾಗಿತ್ತು. ಮಡಕೆಯೇ ಕಾಯಿಸುವ ಪಾತ್ರೆಯನ್ನು ಕಪ್ಪು ಎಂದು ಹೀಗಳೆದಂತಹ ಪ್ರಸಂಗ ಅದಕ್ಕೆ. ರಾಜ್ಯಸಭೆಯಲ್ಲಿ ಸಿ ಪಿ. ಐ. (ಎಂ) ನ ನಾಯಕ ದಿನೇಶ್ ಘೋಷ್‌ರವರು ಕೋಮುವಾದವನ್ನು ಈ ದೇಶದಲ್ಲಿ ಬೆಳೆಸುತ್ತಿರುವವರು ಯಾರು ? ಕೇರಳದಲ್ಲಿ ಕೋಮುವಾದಿ ಪಕ್ಷಗಳೊಡನೆ ಕೂಡಿ ಆಡಳಿತ ನಡೆಸುತ್ತಿರುವ, ಜಮ್ಮು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್‌ಗೆ ಬೆಂಬಲಿಸುತ್ತಿರುವ, ತ್ರಿಪುರಾದಲ್ಲಿ ಛಿದ್ರಕಾರಿ ಟಿ. ಯು. ಜೆ ಎಸ್ (ತ್ರಿಪುರಾ ಉಪಜಾತಿ ಜುಬ ಸಮಿತಿ) ನ ಜೊತೆಗೂಡಿರುವ ಕಾಂಗ್ರೆಸ್ [ಐ] ಪಕ್ಷವೋ ವಿರೋಧ ಪಕ್ಷಗಳೊ ? ಕೋಮುವಾದವನ್ನು ಬೆಳೆಸುತ್ತಿರುವವರು ಯಾರು? ಎಂದು ಕೇಳಿದಾಗ ಪ್ರಧಾನಿಯವರಿಂದ ಮಾತೇ ಹೊರಡಲಿಲ್ಲ ಸ್ವಲ್ಪ ಹೊತ್ತು ಸ್ತಬ್ಧರಾಗಿ ನಿಂತು ಮತ್ತೆ ಇದಕ್ಕೆ ಉತ್ತರ ಕೊಡದೆ ತನ್ನ ಭಾಷಣ ಮುಂದುವರಿಸಿದರು.

ಕಾವಿ ಅಂಗಿ ನಾಜಿಗಳು ಯಾರು ?

ಪ್ರಧಾನಿಯವರು ಎತ್ತಿದ ಮತ್ತೊಂದು ಪ್ರಶ್ನೆಯೂ ಇದೇ ರೀತಿಯದು ಹೊಸ ಬಜೆಟ್‌ನಲ್ಲಿ ಬಡವರ ನಿರ್ಮೂಲನೆ ಮಾಡುವ ಕಾರ್ಯಕ್ರಮ

(8ನೇ ಪುಟ ನೋಡಿ)

ಸಾಟಿಯಿಲ್ಲದ ಧೀಮಂತ ಹೋರಾಟ

[1936 ರಲ್ಲಿ ಅಖಿಲ ಭಾರತ ಕಿಸಾನ್ ಸಭಾ, ಅನೇಕ ತೀವ್ರ ಹೋರಾಟಗಳನ್ನು ನಡೆಸಿ ದೇಶದ ಎಲ್ಲಾ ರಾಜ್ಯಗಳಿಗೆ ಹಬ್ಬಿರುವ ಅನೇಕ ರಾಜ್ಯಗಳಲ್ಲಿ ಧೃಢವಾಗಿ ಬೇರು ಬಿಟ್ಟು ನಿಂತಿರುವ, ರೈತರ ಏಕ ಮಾತ್ರ ಸಂಘಟನೆ. ಈ ಸಂಘಟನೆಯ ಸ್ವರ್ಣ ಮಹೋತ್ಸವದ ಆಚರಣೆಯ ಅಂಗವಾಗಿ 'ಐಕ್ಯರಂಗ' ನಮ್ಮ ದೇಶದಲ್ಲಿ ನಡೆದ ಸಮರಶೀಲ ಹೋರಾಟಗಳ ನೆನಕೆಯನ್ನು ನೀಡುತ್ತದೆ. ಈ ನೆನಕೆಗಳು ಧೀರ ತೆಲಂಗಾಣ ಹೋರಾಟದಿಂದ ಆರಂಭವಾಗುತ್ತದೆ.]

ತೆಲಂಗಾಣ ರೈತರ ಸಶಸ್ತ್ರ ಹೋರಾಟ ಈ ದೇಶದ ಇತಿಹಾಸದಲ್ಲೇ ಅದ್ವಿತೀಯವಾದದ್ದು. ಕಳೆದ ಇನ್ನೂರು ವರ್ಷಗಳ ಚರಿತ್ರೆಯಲ್ಲಿ ನಡೆದ ಬೇರೆ ಯಾವುದೇ ಹೋರಾಟವನ್ನೂ ತೆಲಂಗಾಣದ ಬಂಡಾಯದ ಜೊತೆಗೆ ಹೋಲಿಸುವ ಹಾಗಿಲ್ಲ. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಸಿಕೊಳ್ಳಲಾಗುತ್ತಿರುವ 1857ರ ಸಿಪಾಯಿ ದಂಗೆಯ ಬಗ್ಗೆ ನಾವು ಸಾಕಷ್ಟು ತಿಳಿದಿದ್ದೇವೆ. ಈ ಹೋರಾಟದ ಬಗ್ಗೆ ನಮ್ಮೆಲ್ಲರಿಗೆ ಹೆಮ್ಮೆಯೂ ಇದೆ. ಆದರೆ ಸುಮಾರು ಒಂದು ಮಿಲಿಯ ಜನ ಪಾಲುಗೊಂಡಿದ್ದ ಮತ್ತು ದೇಶಾದ್ಯಂತ ವ್ಯಾಪಿಸಿದ್ದ 1857ರ ಹೋರಾಟವನ್ನು ಬ್ರಿಟಿಷ್ ವಸಾಹತುವಾದಿಗಳು ಕೇವಲ 25,000 ಸೈನಿಕರ ಬಲದಿಂದ ಒಂದೇ ವರ್ಷದೊಳಗೆ ಹತ್ತಿಕ್ಕಿದ್ದು ಹೇಗೆ ? ಈ ದೇಶದ ಪಾಳೆಯಗಾರ ಅರಸರ ಬೆಂಬಲ, ರೈತರು, ಭೂಮಾಲೀಕರು ಮತ್ತು ಸೈನ್ಯದ ಬೆಂಬಲವಿದ್ದು ಈ ಹೋರಾಟ ಕೇವಲ ಒಂದೇ ವರ್ಷದಲ್ಲಿ ನಾಮಾವಶೇಷವಾಯಿತು ಇದಕ್ಕೆ ವ್ಯತಿರಿಕ್ತವಾಗಿ ತೆಲಂಗಾಣ ಹೋರಾಟ ಸೀಮಿತವಾಗಿದ್ದದ್ದು ಆಗಿನ ಹೈದರಾಬಾದ್ ರಾಜ್ಯದ ಮೂರು ಜಿಲ್ಲೆಗಳಿಗೆ ಮಾತ್ರ. ಈ ಹೋರಾಟ ನಡೆಸಿದವರೋ ತೀರಾ ಸಾಮಾನ್ಯ ರೈತಾಪಿ ಜನತೆ. ಅವರಲ್ಲಿ ಹೆಚ್ಚಿನವರಿಗೆ ಬಂದೂಕನ್ನು ಬಳಸುವುದು ಹೇಗೆಂದೇ ಗೊತ್ತಿರಲಿಲ್ಲ. ಈ ಹೋರಾಟಕ್ಕೆ ಪಾಳೆಯಗಾರರ ಅಥವಾ ಭೂಮಾಲಕರ ಬೆಂಬಲ ಇರಲಿಲ್ಲ. ಹಾಗಿದ್ದರೂ ತೆಲಂಗಾಣದ ಸಶಸ್ತ್ರ ಬಂಡಾಯ ಹೈದರಾಬಾದಿನ ನಿಜಾಮ ಮತ್ತು ಅವನ ಕ್ರೂರ ಬಂಟರಾಗಿದ್ದ ರಜಾಕಾರರ ವಿರುದ್ಧ ಎರಡು ವರ್ಷ ಕಾಲ ಮತ್ತು ಜವಾಹರಲಾಲ ನೆಹರೂ ಕಳಿಸಿದ್ದ ಸೈನ್ಯ ಹಾಗೂ ಅರೆ ಸೈನಿಕ ಶಕ್ತಿಗಳ ವಿರುದ್ಧ ಮೂರುವರ್ಷ ಕಾಲ ಮುಂದುವರೆಯಿತು. ಹೀಗೆ ಐದು ವರ್ಷಗಳಷ್ಟು ಧೀರ್ಘ ಕಾಲ ಈ ಹೋರಾಟ ನಡೆಯುವುದಕ್ಕೆ ಸಾಧ್ಯವಾದದ್ದು ಹೇಗೆ ? ತೆಲಂಗಾಣ ಹೋರಾಟದ ಮಹತ್ವ ಇರುವುದು ಇಲ್ಲೇ. ಬಹುಶ: ಈ ಹೋರಾಟವನ್ನು ರಶಿಯಾದ 1905ರ ವಿಫಲ ಕ್ರಾಂತಿಯ ಜೊತೆಗೆ ಹೋಲಿಸಬಹುದೇ ಹೊರತು ಇತರ ಯಾವುದೇ ಹೋರಾಟದ ಜೊತೆಗಲ್ಲ

ವ್ಯತ್ಯಾಸವೇನು ?

ನಮ್ಮ ದೇಶದಲ್ಲಿ ನಡೆದ ರೈತರ ಹೋರಾಟಗಳಸಂಖ್ಯೆ ಕಡಿಮೆಯೇನಲ್ಲ. ಕೇರಳದ ಮಾಪಿಳ್ಳೆಗಳ ಬಂಡಾಯ, ಬಂಗಾಳದಲ್ಲಿ ನೀಲಿ ಬೆಳೆಯುವ ರೈತರ ಹೋರಾಟ ಮೊದಲಾದುವೆಲ್ಲ ಗಮನಾರ್ಹ ಹೋರಾಟಗಳೇ. ಆದರೆ ಇಲ್ಲೆಲ್ಲಿಯೂ ರೈತರು ಸಶಸ್ತ್ರ ಪಡೆಗಳನ್ನು ಎದುರಿಸಿ ಹೋರಾಟ ನಡೆಸಿಲ್ಲ ತೆಲಂಗಾಣದ ರೈತರು ಮಾತ್ರ ಸಶಸ್ತ್ರ ಬಲದ ವಿರುದ್ಧ ಹೋರಾಟ ನಡೆಸಿದ್ದಾರೆ. ಇದು ಸಾಧ್ಯವಾದದ್ದು ಹೇಗೆ?

ಮೊದಲನೆಯದಾಗಿ,
ತೆಲಂಗಾಣ ರೈತರ ಹೋರಾಟ ಮತ್ತು ಇತರ ಹೋರಾಟಗಳ ನಡುವಿನ ಬಹು ಮುಖ್ಯ ವ್ಯತ್ಯಾಸವೆಂದರೆ ಈ ಹೋರಾಟವನ್ನು ಮುನ್ನಡೆಸಿದ್ದು ಕಮ್ಯೂನಿಸ್ಟ್ ಪಕ್ಷ. ಕಮ್ಯೂನಿಸ್ಟ್ ಪಕ್ಷಕ್ಕೆ ಸ್ಪಷ್ಟವಾದ ಗುರಿ ಮತ್ತು ಕಣ್ಣೋಟ ಇತ್ತು. ಕಮ್ಯೂನಿಸ್ಟ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಸ್ವತ: ಅಪಾರ ತ್ಯಾಗ, ಬಲಿದಾನಗಳನ್ನು ಮಾಡುವ ಮೂಲಕ ತೆಲಂಗಾಣ ರೈತರಲ್ಲಿ ಸ್ಫೂರ್ತಿ ಮತ್ತು ಆತ್ಮ ವಿಶ್ವಾಸ ತುಂಬಿದ್ದರು ಇದು ಬೇರೆ ಯಾವುದೇ ಪಕ್ಷಕ್ಕೆ ಸಾಧ್ಯವಾಗುವ ಮಾತಲ್ಲ.

ಎರಡನೆಯದಾಗಿ,
ತೆಲಂಗಾಣ ಹೋರಾಟವನ್ನು ಜನರ ದಿನ ನಿತ್ಯದ ಬದುಕಿನ ಸಮಸ್ಯೆಗಳೊಂದಿಗೆ ಜೋಡಿಸಿ ಅದನ್ನು ಮುನ್ನಡೆಸಲು ಕಮ್ಯುನಿಸ್ಟರಿಗೆ ಸಾಧ್ಯವಾಗಿತ್ತು. 1857ರ ಸಿಪಾಯಿ ದಂಗೆಯ ಉದ್ದೇಶ ಸ್ಥೂಲವಾಗಿ ದೇಶದ ಸ್ವಾತಂತ್ರ್ಯವೇ ಆಗಿದ್ದರೂ ಜನರ ದಿನನಿತ್ಯದ ಬದುಕಿನ ಸಮಸ್ಯೆಗಳ ಜೊತೆಗೆ ಅದು ತನ್ನನ್ನು ಜೋಡಿಸಿಕೊಂಡಿರಲಿಲ್ಲ. ಆದರೆ ತೆಲಂಗಾಣ ಹೋರಾಟದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬನೂ ಈ ಹೋರಾಟದಿಂದ ತನಗೆ ಒಂದಲ್ಲ ಒಂದು ಪ್ರಯೋಜನ ಲಭಿಸಿಯೇ ತೀರುತ್ತದೆ ಎಂಬುದನ್ನು ಅರಿತುಕೊಂಡಿದ್ದ.

ಮೂರನೆಯದಾಗಿ,
ಭೂ ಸಂಬಂಧಗಳಲ್ಲಿ ಕ್ರಾಂತಿಕಾರಿ ಮಾರ್ಪಾಟುಗಳನ್ನು ಮಾಡುವ ಪ್ರಶ್ನೆಯ ಜೊತೆಗೆ ತೆಲಂಗಾಣ ಹೋರಾಟ ನೇರವಾಗಿ ಸಂಬಂಧಿಸಿತ್ತು. ಸುಮಾರು ಶೇ.80ಕ್ಕೂ ಮಿಕ್ಕಿದ ಕೃಷಿ ಯೋಗ್ಯ ಭೂಮಿ ಕೇವಲ ಶೇಕಡಾ 3 ರಿಂದ 4 ರಷ್ಟಿದ್ದ ಗ್ರಾಮಾಂತರ ಪ್ರದೇಶದ ಭೂಮಾಲೀಕರ ಕೈಯಲ್ಲಿ ಕೇಂದ್ರೀಕೃತವಾಗಿದ್ದ ಪರಿಸ್ಥಿತಿಯಲ್ಲಿ ಕಮ್ಯುನಿಸ್ಟ್ ಪಕ್ಷವು ಮಾರ್ಕ್ಸ್‌ವಾದದ ತಿರುಳನ್ನು ಸರಿಯಾಗಿ ಗ್ರಹಿಸಿ ಅದನ್ನು ಅಂದಿನ ವಾಸ್ತವಿಕ ಪರಿಸ್ಥಿತಿಗೆ ಯಿಟ್ಟು ನಿಟ್ಟಾಗಿ ಅನ್ವಯಿಸುವ ಕಾರ್ಯದಲ್ಲಿ ಯಶಸ್ವಿಯಾಗಿತ್ತು.

ನಾಲ್ಕನೆಯದಾಗಿ,
ತೆಲಂಗಾಣ ಹೋರಾಟಕ್ಕೆ ತೆಲುಗು ರಾಷ್ಟ್ರೀಯತೆಯ ಪ್ರಶ್ನೆಯ ಜೊತೆಗೂ ಸಂಬಂಧವಿದ್ದುದನ್ನು ಗಮನಿಸಬೇಕು. ತೆಲುಗು ಮಾತನಾಡುವ ಜನರನ್ನು ಒಂದುಗೂಡಿಸ ಬೇಕೆಂಬ ಬೇಡಿಕೆ ಮದ್ರಾಸ್, ತೆಲಂಗಾಣ ಮತ್ತು ಕರ್ನಾಟಕಗಳ ನಡುವೆ ಹಂಚಿ ಹೋಗಿದ್ದ ತೆಲುಗು ಜನರನ್ನು ನಿಜಾಮನ ವಿರುದ್ಧ ಒಂದುಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಹಾಗಾಗಿ ಅಂದಿನ ಹೈದರಾಬಾದ್ ಪ್ರಾಂತ್ಯವು ತೆಲಂಗಾಣ, ಮರಾಠವಾಡ ಮತ್ತು ಕರ್ನಾಟಕದ ಪ್ರದೇಶಗಳನ್ನು ಒಳಗೊಂಡಿದ್ದರೂ ಮತ್ತು ನಿಜಾಮನ ವಿರುದ್ಧ ಹೋರಾಟ ಇಡೀ ಹೈದರಾಬಾದ್ ಪ್ರಾಂತವನ್ನೇ ಆವರಿಸಿದ್ದರೂ, ರೈತರ ಸಶಸ್ತ್ರ ಬಂಡಾಯ ತೀವ್ರವಾಗಿ ನಡೆದದ್ದು ಹೈದರಾಬಾದ್ ಪ್ರಾಂತದ ತೆಲುಗು ಮಾತನಾಡುವ ಜಿಲ್ಲೆಗಳಲ್ಲಿ–ಅಂದರೆ ತೆಲಂಗಾಣದಲ್ಲಿ ಮಾತ್ರ.

'ಪೋಲೀಸ್ ಕಾರ್ಯಾಚರಣೆ' ಎಂಬ ಹೆಸರಲ್ಲಿ ಕೇಂದ್ರ ಸರ್ಕಾರ 50,000 ಸೈನಿಕರನ್ನೂ ಅರೆಸೈನಿಕ ದಳದವರನ್ನೂ ತೆಲಂಗಾಣಕ್ಕೆ ಕಳುಹಿಸಿ ರೈತರ ಬಂಡಾಯವನ್ನು ಹಿಂಸಾತ್ಮಕವಾಗಿ ಹತ್ತಿಕ್ಕಿದುದರ ಹಿಂದಿನ ಉದ್ದೇಶವೂ ಸ್ಪಷ್ಟ. ದೊಡ್ಡ ಭೂಮಾಲೀಕರು ಮತ್ತು ದೇಶಮುಖರಿಂದ ರೈತರು ಸ್ವಾಧೀನ ಪಡಿಸಿಕೊಂಡಿದ್ದ ಒಂದು ಮಿಲಿಯ ಎಕರೆ ಭೂಮಿಯನ್ನು ಮರಳಿ ಭೂಮಾಲೀಕರ ವಶಕ್ಕೆ ಕೊಡಿಸುವುದೇ ಈ ಕಾರ್ಯಾಚರಣೆಯ ಉದ್ದೇಶ ನೆಹರೂ ಸರ್ಕಾರ ತೆಲಂಗಾಣಕ್ಕೆ ಕಳುಹಿಸಿದ ಸೈನ್ಯ ಈ ದೇಶದ ಒಟ್ಟು ಸೈನಿಕ ಬಲದ ನಾಲ್ಕನೇ ಒಂದರಷ್ಟು ! ಇಷ್ಟರಿಂದಲೇ ತೆಲಂಗಾಣದ ಸೈನಿಕ ಕಾರ್ಯಾಚರಣೆ ಎಷ್ಟು ವ್ಯಾಪಕವಾಗಿ ಮತ್ತು ಕ್ರೂರವಾಗಿತ್ತೆಂಬುದನ್ನು ಊಹಿಸಬಹುದು.

ವೀರ ತ್ಯಾಗ, ಬಲಿದಾನಗಳು

ಸುಮಾರು ನಾಲ್ಕು ಸಾವಿರ ಮಂದಿ ಕಮ್ಯುನಿಸ್ಟರು ಮತ್ತು ರೈತ ಹೋರಾಟಗಾರರು ಪ್ರಾಣತೆತ್ತರು. ಹತ್ತು ಸಾವಿರಕ್ಕೂ ಮಿಕ್ಕಿದ ಕಮ್ಯುನಿಸ್ಟ್ ಕಾರ್ಯಕರ್ತರನ್ನು ಮೂರರಿಂದ ಐದು ವರ್ಷಗಳ ಕಾಲ ಸೆರೆಮನೆಗೆ ಅಟ್ಟಲಾಯಿತು ಪೋಲೀಸಠಾಣೆ ಮತ್ತು ಸೈನಿಕ ಠಾಣೆಗಳಲ್ಲಿ ಪೆಟ್ಟು ತಿಂದು ಹಿಂಸೆಗೊಳಗಾದ ಜನರ ಸಂಖ್ಯೆ ಐವತ್ತು ಸಾವಿರ ಮೀರಿದೆ. ಸೈನಿಕರ ಬರ್ಬರ ಧಾಳಿಗೆ ತುತ್ತಾಗಿ ಲಕ್ಷಾಂತರ ಜನ ಮನೆಮಠ ಕಳೆದು ಕೊಂಡರು. ಮಿಲಿಯಗಟ್ಟಲೆ ರೂಪಾಯಿ ಬೆಲೆಬಾಳುವ ಆಸ್ತಿ ಪಾಸ್ತಿ ಮತ್ತು ಸ್ವತ್ತುಗಳನ್ನು ಕೊಳ್ಳೆ ಹೊಡೆಯಲಾಯಿತು ಇಲ್ಲವೇ ನಾಶಪಡಿಸಲಾಯಿತು ಪೋಲೀಸರು, ಸೈನ್ಯ ಮತ್ತು ಭೂಮಾಲೀಕರ ಗೂಂಡಾಗಳು ಸಾವಿರಾರು ಮಹಿಳೆಯರ ಮೇಲೆ ಅಮಾನುಷ ಅತ್ಯಾಚಾರ ಮತ್ತು ದೌರ್ಜನ್ಯ ನಡೆಸಿದರು.

ಭೂಮಾಲಿಕರ ವಿಕಟಾಟ್ಟಹಾಸ

ನಮ್ಮ ಹೋರಾಟ ಆರಂಭವಾಗುವ ಕಾಲದಲ್ಲಿ ತೆಲಂಗಾಣದ ಪರಿಸ್ಥಿತಿ ಹೇಗಿತ್ತೆಂಬುದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ.

ವಿಸುನೂರು ದೇಶಮುಖನೆಂಬ ಜಮೀನ್ದಾರ 40,000 ಎಕರೆ ಭೂಮಿಯ ಒಡೆಯನಾಗಿದ್ದ. ನಲಗೊಂಡ ಜಿಲ್ಲೆಯ ಜಲಗಾಂವ್ ತಾಲೂಕಿನ ನಲವತ್ತು ಹಳ್ಳಿಗಳ ಒಡೆತನ ಅವನದ್ದೇ. ಸೂರ್ಯಪೇಟೆಯ ದೇಶಮುಖ 20,000 ಎಕ್ರೆ ಜಮೀನು ಹೊಂದಿದ್ದ. ಬಾಬಾ ಸಾಹೇಬ್ ಪೇಟೆ ದೇಶಮುಖನಿಗೆ ಕಮ್ಮಮ್ ಜಿಲ್ಲೆಯ ಮಿರ್ಯಾಲಗುಡೆಂನಲ್ಲಿ ಒಂದು ಲಕ್ಷ ಎಕರೆ ಜಮೀನಿನ ಒಡೆತನ ವಿತ್ತು. ಇಂತಹ ಜಮೀನುದಾರರ ಕೈಕೆಳಗಿರುವ ರೈತರು, ಕಾರ್ಮಿಕರು ಅದರಲ್ಲೂ ಹರಿಜನರ ಪಾಡಂತೂ ಹೇಳತೀರದು. ಅವರು ಬಿಟ್ಟಿ - ಚಾಕರಿ ಮಾಡಬೇಕಾಗಿತ್ತು. ತಾವು ಉತ್ಪಾದಿಸಿದ, ಮಡಿಕೆ, ಮರಗೆಲಸದ ವಸ್ತುಗಳು, ಕಬ್ಬಿಣದ ಸಲಕರಣೆಗಳು, ಹೆಚ್ಚೇಕೆ ಉತ್ಪಾದಿಸಿದ ಸೇಂದಿಯಲ್ಲಿ ಕೂಡಾ ಒಂದು ಭಾಗವನ್ನು ಮುಫತ್ತಾಗಿ ಜಮೀನ್ದಾರರಿಗೆ ಮಾಲಿಪಟೇಲರಿಗೆ ಅಥವಾ ಹಳ್ಳಿಯನ್ನು ಸಂದರ್ಶಿಸುವ ಸರ್ಕಾರಿ ಅಧಿಕಾರಿಗಳಿಗೆ ಮುಫತ್ತಾಗಿ ಒಪ್ಪಿಸಬೇಕಾಗಿತ್ತು. ಕ್ಷೌರಿಕರು ಜಮೀನ್ದಾರರಿಗೂ ಅವರ ಕುಟುಂಬದವರಿಗೂ ಬಿಟ್ಟಿ ಕ್ಷೌರ ಮಾಡಬೇಕಾಗಿತ್ತಲ್ಲದೆ ಉಳಿದ ವೇಳೆ ಅವರ ಪಾದಗಳನ್ನು ಒತ್ತಿ, ಬೆನ್ನು ನೀವಿ ಮಾಲೀಸು ಮಾಡಬೇಕಾಗಿತ್ತು. ಕುರುಬರು ಜಮೀನುದಾರರು ಹೇಳಿದಾಗಲೆಲ್ಲಾ ಅವರಿಗೆ ಮುಫತ್ತಾಗಿ ಕುರಿಗಳನ್ನು ಸರಬರಾಜು ಮಾಡಬೇಕಾಗಿತ್ತು. ಇದೆಲ್ಲವನ್ನೂ ಮಾಡಲು ಒಪ್ಪದಿದ್ದರೆ ಜಮೀನ್ದಾರರಿಂದ ಬಗೆ ಬಗೆಯ ಕಿರುಕುಳ ಮತ್ತು ಹಿಂಸೆ ಕಟ್ಟಿಟ್ಟದ್ದು. ತೆಲಂಗಾಣದಲ್ಲಿವ್ಯಾಪಕವಾಗಿ ಪ್ರಚಲಿತವಿದ್ದ ಈ ದಾಸ್ಯ ಪದ್ಧತಿಯ ವಿರುದ್ಧ ಕಾಂಗ್ರೆಸಿಗರು ಒಮ್ಮೆಯೂ ಚಕಾರ ಎತ್ತಿರಲಿಲ್ಲ. ಮಾತ್ರವಲ್ಲ ಅವರೂ ಜಮೀನ್ದಾರರ ಜೊತೆಗೆ ಶಾಮೀಲಾಗಿದ್ದರು. ಇಂತಹ ಶೋಷಣೆಯ ವಿರುದ್ಧ ಪ್ರತಿಭಟನೆಗೆ ಮುಂದಾದವರು ಕಮ್ಯುನಿಸ್ಟರು ಮಾತ್ರ. ಇಂದೂ ಸಹ ಕಾಂಗ್ರೆಸ್ ಪಕ್ಷದ ಲೋಕಸಭಾ ಸದಸ್ಯರು ಮತ್ತು ಶಾಸಕರಲ್ಲಿ ಶೇ 60 ರಿಂದ 70 ರಷ್ಟು ಜನ ಇಂತಹ ಭೂಮಾಲಿಕ ವರ್ಗಗಳಿಂದಲೇ ಬಂದಿದ್ದಾರೆನ್ನುವುದು ಬಹುಶಃ ಕಾಂಗ್ರೆಸ್ ಪಕ್ಷದ ಚರಿತ್ರೆಯ ಬಗ್ಗೆ ಏನೂ ಗೊತ್ತಿಲ್ಲದಿರುವ ರಾಜೀವ್ ಗಾಂಧಿಗೆ ತಿಳಿದಿರಲಿಕ್ಕಿಲ್ಲ !

ತೆಲಂಗಾಣ ಹೋರಾಟದ ಪರಿಣಾಮ

ಭೂಮಿಯ ಪ್ರಶ್ನೆಯನ್ನು ದೇಶದ ಜನರ ಮುಂದೆ ಅಗ್ರಮಾನ್ಯ ಪ್ರಶ್ನೆಯಾಗಿರಿಸಿದ್ದು ತೆಲಂಗಾಣ ಹೋರಾಟ. ಇದರ ಫಲವಾಗಿ, ಒಲ್ಲದ ಮನಸ್ಸಿನಿಂದಾದರೂ ಅಲ್ಪ ಸ್ವಲ್ಪ ಭೂಸುಧಾರಣೆಗಳನ್ನು ಜಾರಿಗೆ ತರಬೇಕಾದ ಅನಿವಾರ್ಯಕ್ಕೆ ಒಳಗಾಯಿತು ಕಾಂಗ್ರೆಸ್ ಪಕ್ಷ. ವಿನೋಬಾ ಭಾವೆಯವರ ಭೂದಾನವೆಂಬ ನಾಟಕವೂ ಇದೇ ಕಾರಣದಿಂದ ಜನಿಸಿದ್ದು. ಆದರೆ ಈ ಸೋಗಿನ ಕಾರ್ಯಕ್ರಮದಿಂದ ಭೂಸುಧಾರಣೆ ಸಾಧ್ಯವಿಲ್ಲ. ಅದು ಕೇವಲ ಸುಸಂಘಟಿತ ಸಮರಶೀಲ ಹೋರಾಟದಿಂದ ಮಾತ್ರ ಸಾಧ್ಯ ಎಂದು ತೆಲಂಗಾಣದ ಜನತೆಗೆ ಗೊತ್ತಾಯಿತು

ಅಷ್ಟೇ ಅಲ್ಲ,ತೆಲಂಗಾಣ ಬಂಡಾಯ ದೇಶದ ರಾಜಕಾರಣದಲ್ಲಿಕಮ್ಯುನಿಸ್ಟ್ ಪಕ್ಷವನ್ನು ಒಂದು ಪ್ರಬಲ ಶಕ್ತಿಯನ್ನಾಗಿಸಿತು. 1952ರ ಚುನಾವಣೆಯ ಫಲಿತಾಂಶ ಇದನ್ನು ಸಾರಿ ಹೇಳಿದೆ. ಜೊತೆಗೆ ಕಾಂಗ್ರೆಸ್ ಮೂಲೆ ಗುಂಪು ಮಾಡಲು ನಿರ್ಧರಿಸಿದ ಭಾಷಾವಾರು ಪ್ರಾಂತ್ಯ ರಚನೆಯನ್ನು ಸಿ ಪಿ ಐ ನ ನಿರ್ಣಾಯಕ ಪಾತ್ರದಿಂದಾಗಿ ಜಾರಿಗೆ ತರಲೇಬೇಕಾಯಿತು

ಹೋರಾಟದ ಆರಂಭ

ತೆಲಂಗಾಣ ಬಂಡಾಯ ಪ್ರಾರಂಭವಾದದ್ದು ಎರಡನೇ ಮಹಾಯುದ್ಧದ ನಂತರ ಸಾಮ್ರಾಜ್ಯ ಶಾಹಿಗೆ ವಿರುದ್ಧವಾದ ಹೋರಾಟದ ರೂಪದಲ್ಲಿ ಜುಲೈ 4,1946 ರಂದು.ಹಲವಾರು ವರ್ಷಗಳ ವರೆಗೆ ಆಂಧ್ರ ಮಹಾಸಭೆಯ ಕಾರ್ಯಕರ್ತರು ಜನತೆಯ ನಡುವೆ ಮಾಡಿದ್ದ ಪ್ರಾಮಾಣಿಕ ಕೆಲಸವೇ ಈ ಹೋರಾಟಕ್ಕೆ ನಾಂದಿಯಾಯಿತು.ಆಂಧ್ರಮಹಾಸಭೆಯ ಅನೇಕ ಮುಂದಾಳುಗಳೂ

(6ನೇ ಪುಟ ನೋಡಿ)

'ಅಖಿಲ ಭಾರತ ಬಂದ್' ವರದಿಗಳು

ಹುಬ್ಬಳ್ಳಿ–ಧಾರವಾಡ ನಗರ

ಪಕ್ಷದ ನೇತೃತ್ವದಲ್ಲಿ ಸಿಐಟಿಯು, ಎಸ್ ಎಫ್ ಐ ಕಾರ್ಯಕರ್ತರು, ಯುವ ಜನರ ಬೆಂಬಲದಿಂದ ಬಂದ್ ಪೂರ್ಣ ಯಶಸ್ವಿಯಾಯಿತು. ಕಾರಖಾನೆಗಳಲ್ಲಿ ಮುಷ್ಕರ ಯಶಸ್ವಿಯಾಗಿ, ಆರ್ಥಿಕ ಚಟುವಟಿಕೆಗಳು ಸಂಪೂರ್ಣ ಸ್ಥಗಿತವಾದವು. ಕೆ ಎಸ್ ಆರ್ ಟಿ ಸಿಗೆ ಸೇರಿದ ಬಸ್‌ಗಳನ್ನು ತಡೆಹಿಡಿಯಲಾಯಿತು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಕೇತರ ಸಂಘ, ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ನೆರವಿನಿಂದ ಬಂದ್‌ನಲ್ಲಿ ಭಾಗವಹಿಸಿತು.

ಧಾರಾವಾಡದಲ್ಲಿ ಸರ್ಕಾರಿ ನೌಕರರ ಹಾಗೂ ಕಾರ್ಮಿಕ ಮೆರವಣಿಗೆ ಹಾಗೂ ಸಭೆಗಳು ನಡೆದವು. ಹುಬ್ಬಳ್ಳಿಯಲ್ಲಿ ವಿರೋಧ ಪಕ್ಷಗಳ ಸಂಯುಕ್ತ ಮೆರವಣಿಗೆ ಹಾಗೂ ಬಹಿರಂಗ ಸಭೆ ನಡೆಯಿತು. ಈ ಸಭೆಯಲ್ಲಿ ಕಾಂ. ವಿ. ಎಸ್. ಹುಳಕಟ್ಟಿ, ನಿತ್ಯಾನಂದ ಹಾಗೂ ಕೆ.ವಿ. ರಾಯಚೂರ್‌ರವರು ಮಾತನಾಡಿದರು.

ಧಾರವಾಡ ಜಿಲ್ಲೆಯ ಹಾವೇರಿ, ಗದಗ್, ಮುಂತಾದ ಕಡೆಗಳಲ್ಲೂ, ದಾಂಡೇಲಿ, ಹಳಿಯಾಳ, ಸಿರಸಿ, ಹರಿಹರಗಳಲ್ಲಿ ಬಂದ್ ಯಶಸ್ವಿಯಾಗಿದೆ.

ಬಿಜಾಪುರ

ಬಿಜಾಪುರದಲ್ಲಿ ಎಲ್ಲ ವ್ಯಾಪಾರ, ಸಿನೆಮಾ, ಬಸ್‌ಗಳ ಸಂಚಾರ ಸಂಪೂರ್ಣ ನಿಂತಿತ್ತು. ಬಿಜಾಪುರ, ಲಚ್ಯಾಣಗಳಲ್ಲಿ ಸೋಲಾಪುರ–ಹುಬ್ಬಳ್ಳಿ ಮೇಲ್‌ಗಾಡಿಯನ್ನು ತಡೆಹಿಡಿಯಲಾಯಿತು. ಮಹಿಳೆಯರೂ ಸೇರಿ ಅನೇಕ ಜನರು ಬಂಧನಕ್ಕೊಳಗಾದರು. ಸಂಜೆ ಸಾರ್ವಜನಿಕ ಸಭೆ ನಡೆದು ಪಕ್ಷದ ಪರವಾಗಿ ಎನ್.ಕೆ. ಉಪಾಧ್ಯಾಯರು ಹಾಗೂ ಭೀಮಸಿ ಕಲಾದಗಿಯವರು ಮಾತನಾಡಿದರು.

ರಾಯಚೂರು

ಇಡೀ ರಾಯಚೂರು ಜಿಲ್ಲೆಯಲ್ಲಿ ಎಲ್ಲಾ ಕಡೆಗಳಲ್ಲಿ ಬಂದ್ ಯಶಸ್ವಿಯಾಯಿತು. ರಾಯಚೂರಿನಲ್ಲಿ ಎಲ್ಲಾ ಸರ್ಕಾರಿ, ಖಾಸಗಿ ವಾಹನಗಳೂ ಸ್ಥಗಿತವಾಗಿದ್ದವು. ಬೆಳಗ್ಗೆ 11ರ ಸುಮಾರಿಗೆ ಮೆರವಣಿಗೆ ಯೊಂದನ್ನು ನಡೆಸಲಾಯಿತು. ಸಂಜೆ ಬಹಿರಂಗ ಸಭೆಯಲ್ಲಿ ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಕಾಂ. ರಾಮಚಂದ್ರರಾವ್ ರವರು ಮಾತನಾಡಿದರು (ವರದಿ ನೋಡಿ)

ಹೊಸಪೇಟೆ

ಪಕ್ಷದ ಕಾರ್ಯಕರ್ತರು, ಡಿ ವೈ ಎಫ್ ಐ, ಎಸ್ ಎಫ್ ಐ ಕಾರ್ಯಕರ್ತರು ಮೆರವಣಿಗೆ ಹೊರಟು ನಗರವನ್ನು ಸುತ್ತಿ ಬಂದ್ ಯಶಸ್ವಿ ಮಾಡಿದರು. ಅದೇ ದಿನ ರೈಲ್ ದರವನ್ನು ಹೆಚ್ಚಿಸಿದ್ದರ ವಿರೋಧವಾಗಿ ಅಂದೇ ಸಂಜೆ ಗುಂತಕಲ್ ರೈಲುಗಾಡಿಯನ್ನು ತಡೆಹಿಡಿದು ಪ್ರತಿಭಟನೆ ವ್ಯಕ್ತ ಪಡಿಸಲಾಯಿತು. ಸುಮಾರು 40 ಜನರು ಬಂಧನಕ್ಕೊಳಗಾದರು. ಬಂದ್‌ನ ಕಾರಣವನ್ನು ವಿವರಿಸಿ 3-4 ಸಭೆಗಳನ್ನು ನಡೆಸಲಾಯಿತು. ಕಾಂ. ಪರಶುರಾಮ ಕಲಾಲ್, ಕಾಂ. ಗುರುಶಾಂತ್ ಹಾಗೂ ಎಂ.ಜೆ. ನಾಯಕ್ ಸಭೆಯನ್ನುದ್ದೇಶಿಸಿ ಮಾತನಾಡಿದರು

ಗುಲ್ಬರ್ಗಾ

ಗುಲ್ಬರ್ಗ ಮಾತ್ರವೇ ಅಲ್ಲದೆ ಗುಲ್ಬರ್ಗ ಜಿಲ್ಲೆಯ ಶಹಾಪುರ ಜೇವರ್ಗಿ ತಾಲ್ಲೂಕು ಕೇಂದ್ರಗಳಲ್ಲಿಯೂ ಬಂದ್ ಯಶಸ್ವಿಯಾಯಿತು, ಜೇವರ್ಗಿಯಲ್ಲಿ ಮೆರವಣಿಗೆ ಸಭೆಗಳನ್ನು ಮಾಡಲಾಯಿತು ಎಸ್ ಎಫ್ ಐ ನ ಕಾಂ. ನಿಂಗಣ್ಣ ಮೋರಟಗಿ, ರೈತ ಸಂಘದ ಕಾಂ. ವೆಂಕೋಬಿ ರಾಮಾತ್ರಾಡಿ ಮಾತನಾಡಿದರು.

ಉಡುಪಿ

ಸಿಪಿಐ (ಎಂ), ಸಿಪಿಐ, ಜನತಾ ಹಾಗೂ ಭಾಜಪಗಳ ಕರೆಯಂತೆ ಬಂದ್ ಪೂರ್ಣವಾಗಿ ಯಶಸ್ವಿಯಾಯಿತು. ಬ್ಯಾಂಕ್, ಎಲ್ ಐ ಸಿಗಳೂ ಸೇರಿದಂತೆ ಎಲ್ಲಾ ಸರ್ಕಾರಿ ಕಛೇರಿಗಳು ಮುಚ್ಚಿದವು. ಕಾಂಗ್ರೆಸ್ (ಐ) ನ ಚಿತಾವಣೆಯಿಂದ ಪೋಲೀಸರ ಬೆಂಬಲದಲ್ಲಿ ಕೆಲವು ಕಟ್ಟಾ ಕಾಂಗ್ರೆಸ್ಸಿಗರ ಅಂಗಡಿಗಳು ತೆರೆದರೂ, ಬಂದ್ ಅಯಶಸ್ವಿ ಮಾಡಲು ಕಾಂಗ್ರೆಸವರು ಶತಪ್ರಯತ್ನ ಮಾಡಿದರೂ ಬಂದ್ ಯಶಸ್ವಿಯಾಯಿತು. ಹಾಗೂ ಶಾಂತ ಪರಿಸ್ಥಿತಿಯಿತ್ತು. ನಾಲ್ಕು ಪಕ್ಷಗಳ ನಾಯಕರೂ ಜನತೆಗೆ ಅಭಿನಂದಿಸಿ ಸಂಯುಕ್ತ ಹೇಳಿಕೆ ನೀಡಿದ್ದಾರೆ.

ಬಂಟ್ವಾಳ

ಬಂಟ್ವಾಳದಲ್ಲಿಯ ಎಲ್ಲಾಪೇಟೆಗಳೂ ಪೂರ್ಣವಾಗಿ ಬಂದಾಗಿದ್ದವು. ಬಸ್, ಟೂರಿಸ್ಟ್ ಟ್ಯಾಕ್ಸಿ, ವ್ಯಾನು ರಿಕ್ಷಾ, ಚಾಲಕರುಗಳು, ಹಾಗೂ ಬೀಡಿ ಹಂಚು ಮೊದಲಾದ ಕಾರ್ಮಿಕರು ಮುಷ್ಕರ ಹೂಡಿದರು. ಬಂದ್ ಅನ್ನು ಯಶಸ್ವಿ ಮಾಡಿದ ಜನತೆಗೆ ಬಂಟ್ವಾಳ ತಾಲ್ಲೂಕು ಸಮಿತಿಯ ಪರವಾಗಿ ಕಾ॥ ವಾಸುಗಟ್ಟಿ ಅಭಿನಂದಿಸಿದ್ದಾರೆ.

ಮೈಸೂರು

ಸಿ. ಪಿ. ಐ (ಎಂ) ಸೇರಿದಂತೆ 14 ವಿರೋಧ ಪಕ್ಷಗಳು ಐಕ್ಯವಾಗಿ ಕರೆ ನೀಡಿದ್ದ 'ಭಾರತ ಬಂದ್' (ಫೆ: 26) ಕಾರ್ಯಕ್ರಮಕ್ಕೆ ಮೈಸೂರು ಜಿಲ್ಲೆಯಲ್ಲಿ ವ್ಯಾಪಕ ಬೆಂಬಲ ದೊರೆಯಿತು

ಜಿಲ್ಲಾ ಕೇಂದ್ರದಲ್ಲಿ ಬಂದ್ ಕಾರ್ಯಕ್ರಮಕ್ಕೆ ಜನರ ಪೂರ್ಣ ಬೆಂಬಲ ದೊರೆಯಿತು. ಅಂಗಡಿ ಮುಗ್ಗಟ್ಟುಗಳು, ಬಸ್ ಸಂಚಾರ ಬಂದ್ ಆಗಿದ್ದವು. ಕಾರ್ಮಿಕರು ವಿವಿಧ ಗುಂಪುಗಳಲ್ಲಿ ಮೆರವಣಿಗೆ ನಡೆಸಿ ಬೆಲೆ ಏರಿಕೆಯನ್ನು ಪ್ರತಿಭಟಿಸಿದರು. ಸಿ. ಪಿ. ಐ (ಎಂ) ಕಾರ್ಯಕರ್ತರು ಗ್ರಾಮಾಂತರ ಪ್ರದೇಶಗಳಿಗೆ ಹೋಗುತ್ತಿದ್ದ ಹಾಗೂ ನಗರ ಸಂಚಾರಿ ಬಸ್ಸುಗಳ ಓಡಾಟವನ್ನು ಯಶಸ್ವಿಯಾಗಿ ತಡೆಹಿಡಿದರು. ರಿಕ್ಷಾ ಸಂಚಾರವನ್ನು ಸ್ಥಗಿತಗೊಳಿಸಿದರು.

ಹುಣಸೂರು

ಎಸ್. ಎಫ್. ಐ ಸ್ವತಃ ಕಾರ್ಯಕ್ರಮ ರೂಪಿಸಿ ರಿಕ್ಷಾ ಪ್ರಚಾರ ನಡೆಸಿ, ಗುಂಪಾಗಿ ವಿದ್ಯಾರ್ಥಿಗಳ ತಂಡವನ್ನು ಮುನ್ನಡೆಸಿ ಬಂದ್ ಕಾರ್ಯಕ್ರಮವನ್ನು ಇಲ್ಲಿ ಪೂರ್ಣ ಯಶಸ್ವಿಗೊಳಿಸಲಾಯಿತು. ಎಸ್. ಎಫ್. ಐ. ಸಂಗಾತಿಗಳಾದ ಕೆ. ಬಸವರಾಜ್, ಶಿವಪ್ರಕಾಶ್ ಮೊದಲಾದವರು ನೇತೃತ್ವ ನೀಡಿದರು.

ಚಾಮರಾಜನಗರ

ಇಲ್ಲಿನ ಬೀಡಿ ಕಾರ್ಮಿಕರ ಸಂಘ (ಸಿ. ಐ. ಟಿ. ಯು.) ಇತರ ಸಂಘಟನೆಗಳ ನೆರವಿನೊಂದಿಗೆ ಚಾಮರಾಜನಗರ ಬಂದ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿತು

ಟಿ. ನರಸಿಪುರ, ನಂಜನಗೂಡುಗಳಲ್ಲೂ ಬಂದ್ ಕಾರ್ಯಕ್ರಮ ಯಶಸ್ವಿಯಾದ ಬಗ್ಗೆ ವರದಿಗಳು ಬಂದಿವೆ. ○

ಭಾರತ ಬಂದ್ ಅಂಗವಾಗಿ

ಬೃಹತ್ ಸಾರ್ವಜನಿಕ ಸಭೆ

ಕಾಂ॥ ಸೂರ್ಯನಾರಾಯಣರಾವ್ ರವರ ಭಾಷಣ

ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ 26-2-86 ರಂದು ಯಶಸ್ವಿ ಬಂದ್‌ನ ಸಂಜೆ 6-30 ಕ್ಕೆ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದನ್ನು ಏರ್ಪಡಿಸಲಾಗಿತ್ತು. 8-10 ಸಾವಿರ ಜನರನ್ನು ಆಕರ್ಷಿಸಿದ ಈ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಜನತಾ ಪಕ್ಷದ ಅಧ್ಯಕ್ಷ ಎಂ ಚಂದ್ರಶೇಖರ್ ರವರು ವಹಿಸಿದ್ದರು. ಈ ಸಭೆಯಲ್ಲಿ ಸಿ. ಪಿ. ಐ. (ಎಂ) ನ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾಂ ಸೂರ್ಯನಾರಾಯಣರಾವ್ ರವರು ಮಾತನಾಡಿ ಕೇಂದ್ರ ಸರಕಾರದ ಜನವಿರೋಧಿ ನೀತಿ, ಬೆಲೆ ಏರಿಕೆ ಹಣದುಬ್ಬರ ನೀತಿಗಳ ವಿರುದ್ಧ ಹೋರಾಡ ಬೇಕಾದರೆ ಶ್ರೀ ರಾಮಕೃಷ್ಣ ಹೆಗ್ಗಡೆಯವರೂ ಸೇರಿ 5 ಜನ ಮುಖ್ಯ ಮಂತ್ರಿಗಳು ಭಾಗವಹಿಸಿದ 17 ವಿರೋಧಪಕ್ಷಗಳ ಕಲ್ಕತ್ತಾ ಸಮ್ಮೇಳನ ಸಭೆಯಲ್ಲಿ ಎಲ್ಲರೂ ಒಪ್ಪಿಕೊಂಡ 11 ಅಂಶಗಳ ಕನಿಷ್ಠ ಕಾರ್ಯಕ್ರಮದ ಒಂದು ಪರ್ಯಾಯದ ಆಧಾರದ ಮೇಲೆ ಮಾತ್ರ ಸಾಧ್ಯ, ಈ ಪರ್ಯಾಯ ಕಾರ್ಯಕ್ರಮದಲ್ಲಿ ಪ್ರತಿಪಾದಿಸಿದ ಕೆಲಸದ ಹಕ್ಕು ಮೂಲಭೂತ ಹಕ್ಕಾಗಬೇಕು, ಏಕಸ್ವಾಮ್ಯ ಬಂಡವಾಳಗಾರರ ಕೈಗಾರಿಕೆಗಳು ರಾಷ್ಟ್ರೀಕರಣವಾಗಬೇಕು, ಕೈಗಾರಿಕೆಗಳ ಮುಚ್ಚುವಿಕೆ ನಿಲ್ಲಬೇಕು, ರೈತನಿಗೆ ಲಾಭದಾಯಕ ಬೆಲೆ ಸಿಗಬೇಕು, ಎಂಬೀ ಆರ್ಥಿಕ ಕಾರ್ಯಕ್ರಮವೇ ದೇಶದ ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ಭಾರತದ ಕೈಗಾರಿಕೆಗಳು ಉಳಿಯಲು, ಬೆಳೆಯಲು ದಾರಿ ಮಾಡುತ್ತದೆ. ಈ ನೀತಿಗೆ ಬದಲಾಗಿ ರಾಜೀವ ಗಾಂಧಿಯವರು ಆಧುನಿಕ ತಂತ್ರಜ್ಞಾನದ, ನಿರುದ್ಯೋಗ ಹುಟ್ಟಿಸುವ ರಫ್ತು ಆಧಾರಿತ ನೀತಿಯನ್ನು ಅನುಸರಿಸುತ್ತಿದ್ದಾರೆ. ಹೊರದೇಶದಲ್ಲಿ ತಮ್ಮ ಉತ್ಪಾದನೆಗಳು ಮಾರಾಟವಾಗುವುದಿಲ್ಲವೆಂಬ ಕಾರಣಕ್ಕೆ ಆಧುನಿಕ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುತ್ತಿದ್ದಾರೆ ಇದರಿಂದ ಆಮದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ. 30ರಷ್ಟು ಬೆಳೆದಿದೆ. ಆದರೆ ರಫ್ತು, ಕೇವಲ ಶೇ. 6-7 ರಷ್ಟು ಮಾತ್ರ ಬೆಳೆದಿದೆ. ಇದು ದೇಶಕ್ಕೆ ಅಹಿತಕಾರಿ. ವಿಶ್ವ ಬ್ಯಾಂಕ್‌ನ ದಾಸ್ಯಕ್ಕೆ ದೇಶವನ್ನು ಸಿಕ್ಕಿಸುತ್ತದೆ ಎಂದರು

ಈ ಆರ್ಥಿಕ ನೀತಿಯ ಫಲವಾದ ಬಿಕ್ಕಟ್ಟು ಜಾತಿವಾದ, ಕೋಮುವಾದಕ್ಕೆ, ಐಕ್ಯಭಂಜಕ ಪ್ರವೃತ್ತಿಗಳಿಗೆ ದಾರಿ ಮಾಡಿ ಕೊಡುತ್ತದೆ. ಈ ಪ್ರವೃತ್ತಿಗಳನ್ನು ಮೊಟಕು ಹಾಕುವ ಬದಲು ರಾಜೀವಗಾಂಧಿಯವರು ಮುಸ್ಲಿಂ ಮಹಿಳೆಯರ ಜೀವನದ ಹಕ್ಕಿಗೆ ಕುತ್ತು ತರುತ್ತಿದ್ದಾರೆ ನಾವು ಯಾವುದೇ ರೂಪದ ಫಂಡಮೆಂಡಾಲಿಸಂ (ಮೂಲಭೂತವಾದ) ವನ್ನು ಅದು ಮುಸ್ಲಿಂ ಕ್ರೈಸ್ತ, ಸಿಖ್, ಹಿಂದು ಯಾವುದೇ ಆಗಿರಲಿ ವಿರೋಧಿಸಬೇಕು ಎಂದರು ಬೆಲೆಏರಿಕೆಗಳ ಬಗ್ಗೆ ಮಾತನಾಡಿ ಲೋಕಸಭೆಯ ಹಕ್ಕನ್ನು ಮೊಟಕುಗೊಳಿಸುವ ಈ ಬೆಲೆಏರಿಕೆ ಕೇಂದ್ರ-ರಾಜ್ಯ ಸಂಬಂಧಗಳು ಬಿಗಡಾಯಿಸುವಂತೆ ಮಾಡುತ್ತದೆ ಎಂದರು.

ಸಿ.ಪಿ.ಐ.ನ ಎಂ. ಎಸ್. ಕೃಷ್ಣನ್ ರವರು ಮಾತನಾಡಿ ಸಾರ್ವಜನಿಕ ಉದ್ಯಮವನ್ನು ಕೀಳುಗಳೆಯುತ್ತಿರುವ ಖಾಸಗಿ ಉದ್ಯಮಕ್ಕೆ ಪ್ರಾಧಾನ್ಯ ನೀಡುತ್ತಿರುವ ರಾಜೀವಗಾಂಧಿಯವರ ಆರ್ಥಿಕ ನೀತಿಯನ್ನು, ಬೆಲೆ ಏರಿಕೆಯನ್ನು ಟೀಕಿಸಿದರು.

ಜನತಾ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಸಚಿವ ನಜೀರ್ ಸಾಬ್ ರವರು ಬೆಲೆ ಏರಿಕೆಗೆ ಅರ್ಥ ಸಚಿವ ವಿ. ಪಿ ಸಿಂಗ್ ರವರು ಒಮ್ಮೊಮ್ಮೆ ಒಂದು ಕಾರಣ ನೀಡುತ್ತಿದ್ದಾರೆ, ಯಾವುದಕ್ಕೂ ಸಾಮರ್ಥನೆಯಿಲ್ಲ. ಆದರಲ್ಲಿ ರಸಗೊಬ್ಬರ ಮತ್ತು ಆಹಾರದ ಸಬ್ಸಿಡಿ 4000 ಕೋಟಿ ನೀಡಲಾಗುತ್ತಿದೆ ಅದನ್ನು ಕಡಿಮೆ ಮಾಡಬೇಕು ಎನ್ನುತ್ತಾರೆ, ಆದರೆ ಸೋವಿಯತ್ ದೇಶದಲ್ಲಿ ಈ ಸಬ್ಸಿಡಿ 85,000 ಕೋಟಿ ರೂ ನಮ್ಮ ಇಡಿ ಒಂದು ವರ್ಷದ ಯೋಜನೆಯಷ್ಟನ್ನು ನೀಡುತ್ತಾರಲ್ಲ ಎಂದರು

ಇದೇ ಸಭೆಯಲ್ಲಿ ಬಿಜೆಪಿಯ ಎಸ್. ಶಿವಪ್ಪ, ಜನತಾ ಎಂ ಎಲ್. ಸಿ ಟಿ. ಆರ್. ಶಾಮಣ್ಣರವರೂ ಮಾತನಾಡಿದರು. ●

ದರೋಡೆಗೀಡಾದ ಬಡ ಕುಟುಂಬಳಿಗೆ ನೆರವು ನೀಡಲು ಮನವಿ

ಬಂಟ್ವಾಳ ಪುರಸಭಾ ವ್ಯಾಪ್ತಿಗೊಳಪಟ್ಟ ಕುಪ್ಪಿಲ ಮತ್ತು ಬಸ್ತಿಪಡ್ಪು ಪ್ರದೇಶಗಳಲ್ಲಿ ಇತ್ತೀಚೆಗೆ ದರೋಡೆಕೋರರು 2 ಮನೆಗಳಿಗೆ ಮಧ್ಯರಾತ್ರಿ ಒಳನುಗ್ಗಿ 2 ಕುಟುಂಬದ 8 ಮಂದಿಯನ್ನು ಅತ್ಯಂತ ಕ್ರೂರ ರೀತಿ ಜಖಂಗೊಳಿಸಿ ಹೆಂಗಸರ ಬೆಂಡೋಲೆಗಳನ್ನು ಎಳೆದುಕೊಂಡು ಪರಾರಿಯಾಗಿರುವುದನ್ನು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಂಟ್ವಾಳ ತಾಲೂಕು ಸಮಿತಿ ತೀವ್ರವಾಗಿ ಖಂಡಿಸಿದೆ.

ದರೋಡೆ, ಹಲ್ಲೆಗೊಳಗಾದ ಈ 2 ಬಡಕುಟುಂಬಗಳಿಗೆ ಸರ್ಕಾರವು ಆರ್ಥಿಕ ನೆರವು ನೀಡಿ ಸಹಕರಿಸಬೇಕೆಂದು ರಾಜ್ಯದ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಪಕ್ಷದ ಕಾರ್ಯದರ್ಶಿ ಬಿ ವಾಸುಗಟ್ಟಿ ಕೇಳಿಕೊಂಡಿದ್ದಾರೆ

ಕೊಲೆ, ಸುಲಿಗೆ, ದರೋಡೆ, ಜಾತಿಯತೆ ಮುಂತಾದ ಸಮಾಜ ಕಂಟಕ ನೀತಿಯನ್ನು ಸದೆಬಡಿಯಲು ಸರ್ಕಾರವು ನಿರ್ಧಾಯ ಕ್ರಮ ತೆಗೆದುಕೊಳ್ಳಬೇಕೆಂದು ಭಯಭೀತ ವಾತಾವರಣವನ್ನು ತಿಳಿಗೊಳಿಸುವ ಕೆಲಸದಲ್ಲಿ ಪಕ್ಷ ಸಹಕಾರ ನೀಡುತ್ತದೆಂದು ಅವರು ಹೇಳಿದ್ದಾರೆ

ಮುಸ್ಲಿಂ ಮೂಲಭೂತವಾದ ಮತ್ತು ಮಹಿಳೆ

* ಹರಿಣಿ ಕಕ್ಕೇರಿ
* ಶಾಮಲ ಪೂಜಾರ
* ಸುಲೋಚನ ಸಂಘ

ವಿಶ್ವ ಮಹಿಳಾ ದಿನಾಚರಣೆ, ಮಾರ್ಚ್ 8

ಮಾರ್ಚ್ 8 ರಂದು ವಿಶ್ವ ಮಹಿಳಾ ದಿನ 1917 ರಲ್ಲಿ ಮಾನವ ಕೋಟಿಯನ್ನು ಎಲ್ಲ ರೀತಿಯ ಶೋಷಣೆಯಿಂದ ಬಿಡುಗಡೆ ಮಾಡುವ ಕೆಲಸ ಆರಂಭಿಸಿದ ರಷಿಯಾ ಕ್ರಾಂತಿಯು ಈ ವರ್ಷದಲ್ಲಿ ಮಹಿಳೆಯರನ್ನು ಬಂಧನದಿಂದ ವಿಮೋಚನೆಗೊಳಿಸುವ ಕೆಲಸವೂ ಆರಂಭವಾಯಿತು. ಮಹಿಳೆಯರ ಜಾಗತಿಕ ಹೋರಾಟದ ಮುನ್ನಡೆಗಾಗಿ ವಿಶ್ವ ಮಹಿಳಾ ದಿನಾಚರಣೆಯನ್ನು ಅಂದಿನಿಂದ ಆಚರಿಸುತ್ತಾ ಬರಲಾಗಿದೆ.

ಈ ಸಂದರ್ಭದಲ್ಲಿ, ಭಾರತದಲ್ಲಿ ಮಹಿಳೆಯರ ದುಸ್ಥಿತಿಯನ್ನು ಎಲ್ಲರ ಕಣ್ಣಿಗೂ ರಾಚುವಂತೆ ತೋರಿಸಿದ, ಈ ದುಸ್ಥಿತಿಗೆ ಕಾರಣವಾದ ಪಾಳೆಯಗಾರಿ ಶಕ್ತಿಗಳು, ಅವಕ್ಕೆ ಕುಮ್ಮಕ್ಕು ನೀಡುತ್ತಿರುವ ಬಂಡವಾಳಶಾಹಿ ರಾಜಕೀಯ ಪಕ್ಷಗಳ ಮುಖವಾಡವನ್ನು ಕಿತ್ತೊಗೆದ ಎರಡು ಪ್ರಕರಣಗಳನ್ನು ನೆನಪಿಸಲೇ ಬೇಕು.

ಒಂದು, ನಮ್ಮ ರಾಜ್ಯದಲ್ಲಿಯೇ ನಡೆದ ಕುದುರೆಮೋತಿಯ ಕರಾಳ ಪ್ರಕರಣ. ಮತ್ತೊಂದು, ಸುಪ್ರೀಂ ಕೋರ್ಟಿನವರೆಗೂ ಹೋದ ಶಾಬಾನು ಪ್ರಕರಣ. ಶಾಬಾನೂ ಪ್ರಕರಣದಲ್ಲಂತೂ ಈ ದೇಶವನ್ನು ಆಳುತ್ತಿರುವ ಕಾಂಗ್ರೆಸ್ (ಐ) ಪಕ್ಷ ಅಧಿಕಾರದಲ್ಲಿ ಉಳಿಯುವುದಕ್ಕಾಗಿ ಯಾವ ಹೇಸಿಗೆಯ ಮಟ್ಟಕ್ಕೆ ಹೋಗುತ್ತದೆ ಎಂಬುದು ಸಾಬೀತಾಯಿತು. ಸ್ವಚ್ಛ, ಶುದ್ಧ ರಾಜೀವಗಾಂಧಿಯವರ ಮನಸ್ಸಿನ ಹೊಲಸು ಬಹಿರಂಗವಾಯಿತು. ಆಳುವ ಪಕ್ಷದ ಎಂ. ಪಿ. ಗಳು, ಪಕ್ಷದ ಸಮಿತಿಗಳನ್ನೇ ಕೇಳದೆ ಅತ್ಯಂತ ಪ್ರಜಾಪ್ರಭುತ್ವ ವಿರೋಧಿ ರೀತಿಯಲ್ಲಿ ಲೋಕಸಭೆಯ ಮುಂದಿರಿಸಿರುವ "ಮುಸ್ಲಿಂ ಮಹಿಳೆಯರ ಹಕ್ಕುಗಳ ರಕ್ಷಣಾ ಮಸೂದೆ"ಯನ್ನು ದೇಶದ ಎಲ್ಲಾ ವಿರೋಧ ಪಕ್ಷಗಳೂ ವಿರೋಧಿಸುತ್ತಿವೆ. ಮುಸ್ಲಿಂ ಮೂಲಭೂತವಾದಿಗಳ ಹೊರತಾಗಿ. ಕೇಂದ್ರ ಸರಕಾರದ ಮಂತ್ರಿ ಆರಿಫ್ ಮೊಹಮ್ಮದ್ ಖಾನ್ ರವರು ಈ ಕಾನೂನಿಗೆ ಸಮ್ಮತಿಸದೆ ರಾಜೀನಾಮೆ ನೀಡಿ ಹೊರ ಬಂದಿರುವುದನ್ನು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಸ್ವಾಗತಿಸಿವೆ.

ವಿಶ್ವ ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ "ಕುದುರೆಮೋತಿ" ಪ್ರಕರಣ ಹೋರಾಟದ ಮುಂಚೂಣಿಯಲ್ಲಿದ್ದ ರಾಯಚೂರಿನ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಸಂಗಾತಿಗಳು ಬರೆದಿರುವ ಲೇಖನವನ್ನು ಪ್ರಕಟಿಸುತ್ತಿದ್ದೇವೆ.

ಈಗ್ಗೆ ಸುಮಾರು ಒಂದು ವರ್ಷದಿಂದೀಚೆಗೆ ನಮ್ಮ ದೇಶದಾದ್ಯಂತ ಚರ್ಚಾಸ್ಪದವಾದಂಥ ಮಹತ್ತರ ವಿಷಯಗಳಲ್ಲೊಂದಾದ ವಿವಾಹ ವಿಚ್ಛೇದಿತ ಮುಸ್ಲಿಂ ಮಹಿಳೆಗೆ, ಮಾನವೀಯತೆಯ ಹಿನ್ನೆಲೆಯಲ್ಲಿ ಜೀವನಾಂಶ ಕೊಡಬೇಕೇ ಬೇಡವೇ ಎಂಬುದು ಈ ವಿಷಯದ ಬಗ್ಗೆ ಸ್ಪಷ್ಟ ನಿಲುವನ್ನು ತಾಳಲು ನಾವು, ಕೊಡಬಾರದೆಂದು ಹೇಳುವ "ಮುಸ್ಲಿಂ ವೈಯಕ್ತಿಕ ಕಾನೂನಿನ" ಬಗ್ಗೆ ಮತ್ತು ಕೊಡಬೇಕೆಂದು ಸರ್ವೋಚ್ಛ ನ್ಯಾಯಾಲಯವು ಅಪರಾಧ ದಂಡ ಸಂಹಿತೆ 125 ನೇ ಕಲಂ ನ ಆಧಾರದಲ್ಲಿ ತೀರ್ಪು ನೀಡಿರುವುದರಿಂದ ಈ ಕಲಂ ಬಗ್ಗೆ ಕೂಲಂಕುಷವಾಗಿ ತಿಳಿಯುವ ಅವಶ್ಯಕತೆ ಇದೆ.

ಮುಸ್ಲಿಂ ವೈಯಕ್ತಿಕ ಕಾನೂನು

ಮುಸ್ಲಿಂ ನಡುವಳಿಕೆ ಕುರಿತಾದ ಧಾರ್ಮಿಕ ನಿಯಮಗಳನ್ನೊಳಗೊಂಡ ಗ್ರಂಥವೇ "ಶರಿಯತ್" ಎಂದು ಹೇಳಲ್ಪಡುತ್ತದೆ. ಇದರ ಆಧಾರದ ಮೇಲೆ ರಚಿತವಾದ "ಮುಸ್ಲಿಂ ವೈಯಕ್ತಿಕ ಕಾನೂನು"- ಬಹು ಪತ್ನಿತ್ವ, ತಲ್ಲಾಖ್ ವಾರೀಸು ಹಕ್ಕು, ವಕ್ಫ್, ನಿಯಮ ಮೊದಲಾದ ಕೌಟುಂಬಿಕ ಮತ್ತು ವೈಯಕ್ತಿಕ ನಿಯಮಗಳನ್ನು ಒಳಗೊಂಡಿರುವುದು.

ವಿವಾಹ ವಿಚ್ಛೇದನ ವಿಷಯದಲ್ಲಿ ಸಹ ಸಾಕಷ್ಟು ತಾರತಮ್ಯವಿದ್ದು ಪುರುಷನಿಗೆ ತನ್ನ ಅನುಕೂಲಕ್ಕೆ ತಕ್ಕಂತೆ ಯಾರ ಸಾಕ್ಷಿಯೂ ಇಲ್ಲದೆ, ಯಾವ ಕಾರಣವೂ ಕೊಡದೇ ಸತತ ಮೂರು ಬಾರಿ "ತಲಾಖ್" ಎಂದರೆ ಮುಗಿಯಿತು. ಪತ್ನಿ ಹೊರಗೆ ಹೋಗಬೇಕಾಗುತ್ತದೆ. ಎಲ್ಲಿಗೆ? ಎಲ್ಲಿಗೆ ಎಂಬ ಪ್ರಶ್ನೆಗೆ ವೈಯಕ್ತಿಕ ಕಾನೂನಿನಲ್ಲಿ ಉತ್ತರವೇನೂ ಇಲ್ಲ. ಘೋಷಾ ಪದ್ಧತಿಯನ್ನು ಅನುಸರಿಸುವ ಮುಸ್ಲಿಂ ಸಹೋದರಿಯರಿಗೆ ಜೀವನೋಪಾಯದ ದಾರಿ ಯಾವುದು? ಬಿಕ್ಷೆ ಮತ್ತು ಕಳ್ಳತನಗಳನ್ನೂ ಮೀರಿ ಅನಿವಾರ್ಯತೆಯಿಂದ ಒಂದು, ವೇಶ್ಯೆಯರಾಗಬೇಕು ಇಲ್ಲಾ ತಮ್ಮ ಜೀವನವನ್ನೇ ಅಂತ್ಯಗೊಳಿಸಬೇಕು. "ಮರು ಮದುವೆಯ ಸವಲತ್ತು ಇದೆಯಲ್ಲ ಎಂದು ವಾದಿಸುವ ಮೂಲಭೂತವಾದಿಗಳು, ಸ್ವಂತ ಅಸ್ತಿತ್ವ ಇಲ್ಲದ ಮಹಿಳೆಯರಿಗೆ ಕೇವಲ ಅವರ ರೂಪ, ಯೌವನ ಮತ್ತು ಆಸ್ತಿಗಳಷ್ಟೇ, ಸಮಾಜದಲ್ಲಿ ಮೌಲ್ಯವಿರುವುದನ್ನು ಅರಿತಿಲ್ಲವೆ? ಮೇಲಾಗಿ ಮಕ್ಕಳನ್ನು ಹೊಂದಿರುವ ಮಹಿಳೆಗೆ ನಿಜ ಜೀವನದಲ್ಲಿ ಮರು ಮದುವೆಯಾಗುವುದು ಹೇಳಿದಷ್ಟು ಸುಲಭವೇ?

ಅದೇ ಒಬ್ಬ ಸ್ತ್ರೀ ತನ್ನ ಪತಿಯಿಂದ ವಿಚ್ಛೇದನ ಪಡೆಯಬೇಕಾದರೆ ಸರಿಯಾದ ಕಾರಣ ಕೊಟ್ಟು ನ್ಯಾಯಾಲಯದ ಕಟ್ಟೆ ಹತ್ತಬೇಕು. ಪತಿಯು ನಪುಂಸಕನಾಗಿರಬೇಕು, ಇಲ್ಲವೇ ಆತನು ಕುಷ್ಠರೋಗಿಯಾಗಿರಬೇಕು, ಇಲ್ಲವೇ ತನಗೆ ಚಿತ್ರಹಿಂಸೆ ಕೊಡುತ್ತಿರುವಂತೆ ಸಾಬೀತು ಪಡಿಸಬೇಕು. ಪತ್ನಿಯನ್ನು ಗಾಯವಾಗದಂತೆ ಹೊಡೆದರೆ ತಪ್ಪಿಲ್ಲ ಎಂದು ಖುರಾನ್ ಬೋಧಿಸುತ್ತದಾದ ಕಾರಣ ಬರೀ ಹೊಡೆಯುವ ಕಾರಣಕ್ಕಾಗಿ ಆಕೆ ನ್ಯಾಯಲಯಕ್ಕೆ ಹೋಗುವಂತಿಲ್ಲ. ಹೇಗಿದೆ ಧರ್ಮ ಕಾನೂನುಗಳ ನ್ಯಾಯ?

ಧಾರ್ಮಿಕ ಕಟ್ಟುಪಾಡುಗಳು ಮತ್ತು ಕಾನೂನುಗಳಿಂದ ಉದ್ಭವಿಸುವ ಈ ಎಲ್ಲಾ ಸಮಸ್ಯೆಗಳಿಂದಾಗಿ ಮುಸ್ಲಿಂ ಮಹಿಳೆ ಎಂತಹ ಬರ್ಬರ ಜೀವನವನ್ನೂ ಮೂಕಿತ್ತಿನಂತೆ, ಧ್ವನಿ ಎತ್ತದೆ ಅನುಭವಿಸುವ ಒಂದು ಅನಿವಾರ್ಯತೆಗೆ ಒಳಗಾಗಿದ್ದಾಳೆ.

ಇನ್ನು ವಾರಿಸು ಹಕ್ಕು ಮತ್ತು ವಕ್ಫ್‌ಗಳಲ್ಲಿ ಸಹ ತೀವ್ರ ಅಸಮಾನತೆಗಳನ್ನೇ ಕಾಣುತ್ತೇವೆ.

ಜೀವನಾಂಶದ ಹಕ್ಕು

ಆಳುವ ವರ್ಗದ ಜೊತೆ ಜೊತೆಗೇ ಉದ್ಭವಿಸಿದ ಪುರುಷ ಪ್ರಾಧಾನ್ಯತೆಯ ನಿರ್ಲಕ್ಷ್ಯ, ತಿರಸ್ಕರಣ ಹಾಗೂ ನಿಬಂಧಗಳಿಗೆ ಬಲಿಯಾಗಿ ಕಣ್ಣೀರನ್ನೇ ಕುಡಿದು ಬದುಕುತ್ತಿರುವ ಮಹಿಳೆಯರಿಗೆ ಈ ಕಲಂ ವರದಾನವಾಗಿದೆ. ಇದು ಎಲ್ಲಾ ಧರ್ಮದ ವ್ಯಕ್ತಿಗಳಿಗೂ ಸಂಬಂಧಿಸುತ್ತದೆ. ಇದರ ಪ್ರಕಾರ ಸಾಕಷ್ಟು ಆದಾಯವುಳ್ಳ ವ್ಯಕ್ತಿ, ತನ್ನ ನಿಸ್ಸಹಾಯಕಿ ಪತ್ನಿ, ಮಕ್ಕಳು ಅಥವಾ ಮುದಿ ತಂದೆ-ತಾಯಿಗಳನ್ನು ಪೋಷಿಸಲು ನಿರಾಕರಿಸಿದರೆ ಅವರು ಸಂಬಂಧಿಸಿದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿ ಜೀವನಾಂಶ ಕೇಳಬಹುದು. ಇದು ರುಜುವಾತಾದರೆ ಅರ್ಜಿದಾರಳಿಗೆ ತಿಂಗಳಿಗೆ ರೂ 500 ಕ್ಕೆ ಮೀರದಂತೆ ಜೀವನಾಂಶ ನೀಡುವ ಆದೇಶ ನ್ಯಾಯಾಲಯ ಮಾಡಬಹುದು. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಸುಪ್ರಿಂ ಕೋರ್ಟು ಶಾಬಾನೂ ಪ್ರಕರಣದಲ್ಲಿ ವಿವಾಹ ವಿಚ್ಛೇದಿತ ಮುಸ್ಲಿಂ ಮಹಿಳೆಯ ಜೀವನಾಂಶದ ಹಕ್ಕನ್ನು ಒಮ್ಮತದಿಂದ ಎತ್ತಿ ಹಿಡಿದಿದೆ. ಇದು ಫುಲ್ ಬೆಂಚ್ ತೀರ್ಪು ಆದಕಾರಣ ಇದರ ವಿರುದ್ಧ ಯಾರೂ ಅಪೀಲಿಗೆ ಹೋಗುವಂತಿಲ್ಲ. ಮುಸ್ಲಿಂ ವೈಯಕ್ತಿಕ ಕಾನೂನಿನ ಯಾವುದೇ ಭಾಗವು ಈ ಕಲಂಗೆ ವಿರೋಧವಾಗಿದ್ದರೆ, ಆ ಭಾಗವು ಊರ್ಜಿತವಾದುದಲ್ಲ ಮತ್ತು ಕಾನೂನು ಸಮ್ಮತವಾದುದಲ್ಲ ಎಂದು ಸುಪ್ರೀಂ ಕೋರ್ಟಿನ ಐವರು ನ್ಯಾಯಮೂರ್ತಿಗಳ ಪೀಠ ಸರ್ವಾನುಮತದಿಂದ ಘೋಷಿಸಿದೆ. ಭಾರತೀಯ ಭಾವೈಕ್ಯತೆ ಮತ್ತು ಐಕ್ಯತೆಯ ದೃಷ್ಟಿಯಿಂದ ಸಂವಿಧಾನದ 44 ನೆಯ ಅನುಚ್ಛೇದದ ಪ್ರಕಾರ "ಏಕ ರೂಪದ ಸಿವಿಲ್ ಕೋಡನ್ನು" ಜಾರಿಗೆ ತರುವುದು ಅಗತ್ಯವೆಂದು ಕೋರ್ಟು ಅಭಿಪ್ರಾಯ ಪಟ್ಟಿದೆ.

ಈ ತೀರ್ಪಿನ ವಿರುದ್ಧ ಪ್ರತಿಭಟನೆ ಸೂಚಿಸಿದವರು ಕ್ರಿಮಿನಲ್ ಪ್ರೊಸೀಜರ್ 125 ಕಲಂ ಅನ್ನು ಮುಸ್ಲಿಂ ಕಾಯಿದೆಗನುಗುಣವಾಗಿ ಮಾರ್ಪಡಿಸಬೇಕು ಮತ್ತು ಸಂವಿಧಾನದ 44 ನೇಯ ಅನುಚ್ಛೇದವನ್ನು (ಜಾತ್ಯಾತೀತ ರಾಷ್ಟ್ರವೆಂದು ಸೂಚಿಸುವ) ಕಿತ್ತು ಹಾಕಬೇಕೆಂದು ವಾದಿಸುತ್ತಾರೆ. 1400 ವರ್ಷಗಳ ಹಿಂದೆ ಮಾಡಿದ ಕಾಯಿದೆ ಕಟ್ಟಳೆಗಳನ್ನೇ ಮುಂದುವರಿಸಿಕೊಂಡು ಹೋಗಲು ಹವಣಿಸುತ್ತಾರೆ.

ಧರ್ಮ ಹಾಗೂ ಕಾನೂನು

ಬದಲಾಗುತ್ತಿರುವ ಪರಿಸ್ಥಿತಿಗಳಿಂದಾಗಿ ಧರ್ಮದ ಬಗ್ಗೆ ನಂಬಿಕೆ ಕಳೆದುಕೊಳ್ಳುತ್ತಿರುವ ಜನತೆಯನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲು ಯಾವುದೇ ಬದಲಾವಣೆಗೆ ಮೂಲಭೂತವಾದಿಗಳು ತಯಾರಿಲ್ಲ. ಎಪ್ಪತ್ತು ವರ್ಷದ ಮುದುಕಿ ಶಾಬಾನು ಬೇರೆ ದಾರಿ ಕಾಣದೆ ವಿಚ್ಛೇದಿತ ಪತಿಯಿಂದ ಜೀವನಾಂಶದ ತೀರ್ಪನ್ನು ಪಡೆದಾಗ ಆಕೆಯ ಮನೆಯ ಮುಂದೆ ಮೆರವಣಿಗೆ ಹೊರಟು, ಮನೆಯ ಮೇಲೆ ಕಲ್ಲು ತೂರಿ, "ಕಾಫಿರ್" "ಕಾಫಿರ್" ಎಂದು ಕೂಗಿ, ಸರ್ವ ರೀತಿ ಅವಮಾನಿಸಿ ಆಕೆಯ ಮೇಲೆ ಒತ್ತಡ ತಂದು ಆಕೆ ಈ ಜೀವನಾಂಶವನ್ನು ನಿರಾಕರಿಸುವಂತೆ ಮಾಡಿದರು ಮಾನಸಿಕವಾಗಿ ಚಿತ್ರಹಿಂಸೆಗೈದರು.

ಈ ಸಂದರ್ಭದಲ್ಲಿ ಸಾಮ್ಯವಾದದ ನೇತಾರರಾದ, ಮಹಾನ್ ತತ್ವಶಾಸ್ತ್ರಜ್ಞನಾದ ಕಾರ್ಲ್ ಮಾರ್ಕ್ಸ್‌ರ ಅಭಿಪ್ರಾಯ ಬಹಳ ಸಮಂಜಸವೆನಿಸುತ್ತದೆ. ಯಾವುದೇ ಸಮಾಜದಲ್ಲಿ ಪ್ರಚಲಿತವಿರುವ ಮತ್ತು ಆ ಸಮಾಜವನ್ನು ಆಳುವ - ವಿಚಾರಗಳು, ಆ ಸಮಾಜವನ್ನು ಆಳುವವರ ವಿಚಾರಗಳು-ಆಳುವವರು ತಮ್ಮ ವರ್ಗದ ಹಿತಾಸಕ್ತಿಯನ್ನು ಕಾಯ್ದುಕೊಳ್ಳಲು ಹೆಣೆದಿರುವ ವಿಚಾರಗಳ ವಿರುದ್ಧ, ಶೋಷಿತರು ದಂಗೆ ಏಳದಂತೆ ತಡೆಗಟ್ಟಲು ತನ್ನ ವರ್ಗಕ್ಕೆ ಅನುಕೂಲಕರವಾದ ತತ್ವಶಾಸ್ತ್ರದ ಹಿನ್ನೆಲೆಯಲ್ಲಿ "ಧರ್ಮ" ಎಂಬ ಅಸ್ತ್ರವನ್ನು ಅಧಿಕೃತವಾಗಿ ಗೊತ್ತುಪಡಿಸಿದ ಚೌಕಟ್ಟಿನೊಳಗೆ ಪ್ರಯೋಗಿಸುತ್ತಾರೆ.

ಈ ದಿಶೆಯಲ್ಲಿ ಆಳಿಸಿಕೊಳ್ಳುವ ಜನಸಮೂಹದ ಒಂದು ವಿಭಾಗವಾಗಿ ಬರುವ ಮಹಿಳೆಯೂ ಸಹ ಹೊರತಾಗಿಲ್ಲದೆ, ಧರ್ಮ ಕಾನೂನುಗಳ ಅಸ್ತ್ರದಿಂದ ನಿಯಂತ್ರಿಸಲ್ಪಟ್ಟಿದ್ದಾಳೆ. ಇದು ಇಂದಿನ ಇಪ್ಪತ್ತನೆಯ ಶತಮಾನದ ಅಂತ್ಯ ಕಾಲಕ್ಕೂ ಸ್ಪಷ್ಟ.

ಕಾನೂನು ಎಂಬುದು ಆಳುವ ವರ್ಗವು, ತನ್ನ ಹಿತಾಸಕ್ತಿಗಾಗಿ ನಿರ್ಮಿಸಿದ ಕಟ್ಟಳೆಗಳು, ಕಾನೂನುಗಳಿಂದ ತನಗಾಗುತ್ತಿರುವ ಅನ್ಯಾಯಗಳ ಬಗ್ಗೆ ಪ್ರತಿಭಟಿಸಿ ಜನ ಪ್ರವಾದ ಮತ್ತು ಮಾನವೀಯ ಕಾನೂನುಗಳನ್ನು ಮರ್ದಿತ ಜನರು ಕೇಳುತ್ತಿದ್ದಾರೆ. ಜನಗಳ ಮೇಲಿನ ತನ್ನ ಹಿಡಿತ ಸಡಿಲಬಾರದೆಂಬ ಉದ್ದೇಶದಿಂದ, ಧರ್ಮವನ್ನು ಅಸ್ತ್ರವಾಗಿ ತನ್ನೊಂದಿಗೆ ಸೇರಿಸಿಕೊಂಡು ಇಂದಿನ ಭೂಮಾಲಿಕ ಭೂರ್ಷ್ವಾ ಆಳುವ ವರ್ಗಗಳು ಪ್ರಭುತ್ವ ನಡೆಸುತ್ತಿವೆ. ಜನವಿರೋಧಿ ಕಾನೂನುಗಳನ್ನು ಪ್ರಶ್ನಿಸಿದರೆ, ಕಾನೂನಿನೊಟ್ಟಿಗೆ ಧರ್ಮ ಸೇರ್ಪಡೆಯಾಗಿ ಜನಗಳ ಮೇಲೆ ನಿಯಂತ್ರಣವನ್ನು ಸಾಧಿಸುತ್ತಿದೆ. "ಧರ್ಮದಿಂದಲೇ ಕಾನೂನು" ಎಂಬ ಭ್ರಮೆಯನ್ನು ಜನರಲ್ಲಿ ಹುಟ್ಟಿಸುವುದರಿಂದ ಮತ್ತು, ವಿವಾಹ ಹಾಗೂ ಇತರೇ ಕುಟುಂಬ ಸಂಬಧಿ ಸಮಸ್ಯೆಗಳು ಆಳುವ ವರ್ಗಗಳ ಪ್ರಭುತ್ವ ನಿರ್ಮಿತ ಕಾನೂನುಗಳಲ್ಲಿ ಸಿಕ್ಕಿಬಿದ್ದಿರುವುದರಿಂದ, ಪ್ರಭುತ್ವದಿಂದ ಧರ್ಮವನ್ನು ಬೇರ್ಪಡಿಸಿ ಜಾತ್ಯಾತೀತ ಪ್ರಭುತ್ವವನ್ನಾಗಿ ಪರಿವರ್ತಿಸಬೇಕಾದುದು ಕರ್ತನ ಕಾರ್ಯಭಾರವಾಗಿದೆ. ಈ ಹಿನ್ನೆಲೆಯಲ್ಲಿ "ಸಮಾನ ಸಿವಿಲ್ ಕೋಡ್" ಬೇಡಿಕೆ ಅತ್ಯಂತ ಪ್ರಜಾಸತ್ತಾತ್ಮಕವಾದುದಾಗಿದೆ. ಯಾವ ಧರ್ಮದ ಮಹಿಳೆಗೆ ಆಗಲಿ ಅನುಕೂಲಗಳು ಸಿಗಬೇಕೆಂದಾದಲ್ಲಿ ಅದು ಅವಳ ಹಕ್ಕಿನಿಂದ ಬರುವಂತಹುದಲ್ಲ. ಕೇವಲ ಭಿಕ್ಷೆಯಾಗಿ, ಕಾನೂನುಗಳು ಕೊಡಮಾಡುವ ಒಂದು ಸವಲತ್ತು ಮಾತ್ರ. ಹಾಗಾಗಿ ಇದು ತಾತ್ಕಾಲಿಕವಾಗುವಷ್ಟೇ ಇರಲು ಸಾಧ್ಯ ಉದಾಹರಣೆಗೆ- ವಿಚ್ಛೇದಿತ ಮುಸ್ಲಿಂ ಮಹಿಳೆಗೆ, ಅವಳ ಮಗುವಿನ ರಕ್ಷಣೆ, ಅವಳ ಹಕ್ಕಿನಿಂದಲ್ಲದೆ ಕಾನೂನು ಮಾಡಿಕೊಡುವ ಒಂದು ಸವಲತ್ತಾಗಿದ್ದು ಈ ರಕ್ಷಣೆಯ ಹಕ್ಕು ಆಕೆ ಪುನಃ ಮದುವೆಯಾಗುವವರೆಗೆ ಮಾತ್ರವಿರುತ್ತದೆ. ನಂತರ ಯಾವುದೇ ಮಾನವೀಯ ಅನಿಸಿಕೆಗಳಿಲ್ಲದೆ ಈ ಹಕ್ಕನ್ನು ಕಿತ್ತುಕೊಳ್ಳುತ್ತದೆ. ಹೆಣ್ಣೊಬ್ಬಳು ಯಶಸ್ವಿ, ತಾಯಿಯಾಗಬೇಕಾದರೆ, ಆಕೆ ತಾಯಿಯಾದರಷ್ಟೇ ಸಾಲದು, ಎಂಥದೇ ಪರಿಸ್ಥಿತಿ ಇದ್ದರೂ ಗಂಡನಿಗೆ ಹೆಂಡತಿಯಾಗಿ ಉಳಿದರೇನೇ ಆಕೆ, ಮಕ್ಕಳ ಮೇಲಿನ ಹಕ್ಕನ್ನು ಉಳಿ

ಮಹಿಳೆಯರ ಹೋರಾಟ ಮತ್ತು ದೇಶದ ಐಕ್ಯತೆ

ಸಿಕೊಳ್ಳಲು ಸಾಧ್ಯ ಎಂಬುದು ಈ ಕಾನೂನುಗಳ ಅರ್ಥ. ಆದರೆ ಈ ಕಟ್ಟುಪಾಡುಗಳು ಗಂಡಿಗೆ ಮಾತ್ರ ಇಲ್ಲ

ದೇಶದ ಐಕ್ಯತೆಗೆ ಧಕ್ಕೆ

ಧರ್ಮದಲ್ಲಿ ಹಸ್ತಕ್ಷೇಪವಾಗಿದೆಯೆಂದು ಬೊಬ್ಬೆ ಹಾಕುವುದಾಗಲೀ ಅಥವಾ "ಸಮಾನ ಸಿವಿಲ್ ಕೋಡ್‌ನ" ವಿರುದ್ಧ ಧ್ವನಿ ಎತ್ತುವರಿಂದಾಗಲೀ ಕೇವಲ ಮುಸ್ಲಿಂ ಮಹಿಳೆಯರ ಶೋಷಣೆಯಷ್ಟೇ ಅಲ್ಲ, ಜೊತೆಗೆ ದೇಶದ ಐಕ್ಯತೆಗೆ ಧಕ್ಕೆ ಉಂಟಾಗುತ್ತಿದೆ.

ಬೇರೆ ಬೇರೆ ಧರ್ಮದ ಜನರು, ಆಯಾ ಧರ್ಮದ ಅಡಿಯಲ್ಲಿ ಮುಂದುವರಿದು, ತಮ್ಮದೇ ಪ್ರತ್ಯೇಕ ರಾಷ್ಟ್ರ ಕಟ್ಟುವುದರಿಂದ ಮಾತ್ರ, ಸುಖ ಸಮೃದ್ಧತೆಗಳು ಉಂಟಾಗುತ್ತದೆಂಬ ಭ್ರಮೆಯನ್ನು ಪೋಷಿಸುವ ಹಿನ್ನೆಲೆಯಲ್ಲಿ ಕಾನೂನಿನಲ್ಲಿಯೂ ಈ ಪ್ರತ್ಯೇಕತೆಯನ್ನು ಕೇಳುತ್ತಿರುವುದು ಗಮನೀಯವಾದುದು. ಆದರೆ ಈ ಅಭಿಪ್ರಾಯವು ಅದೆಷ್ಟು ದೇಶಕ್ಕೆ ಅಪಾಯಕರ ಎಂಬುದನ್ನು ಅನುಭವಗಳ ಆಧಾರದಲ್ಲಿ ವಿಶ್ಲೇಷಿಸಬೇಕಾಗಿದೆ. ಸ್ವಾತಂತ್ರ್ಯ ನಂತರ ವಿಭಜನೆಗೊಂಡು ಬೇರೆಯಾದ ಪಾಕಿಸ್ತಾನವು ಒಂದೇ ಧರ್ಮದ – ಜನಗಳದ್ದಾದರೂ, ಭಾರತಕ್ಕಿಂತ ಹೆಚ್ಚಿನ ಸಮೃದ್ಧಿಯನ್ನು ಯಾವ ರಂಗದಲ್ಲಿಯೂ ಪಡೆಯಲಾರದ್ದು, ಇರಾನ್ ರಾಷ್ಟ್ರದ ಆಡಳಿತ ಖೊಮೇನಿ ಎಂಬ ಒಬ್ಬ ಧರ್ಮ ನಾಯಕನ ಕೈಯಲ್ಲಿದ್ದು ಯಾವುದೇ ಪ್ರಗತಿಯನ್ನು ಸಾಧಿಸದಿರುವುದು ಎದುರಿಗೆ ಇರುವ ಸಾಕ್ಷ್ಯಗಳು.

ಆಯಾ ಧರ್ಮ, ಮತಗಳ ಆಧಾರದಲ್ಲಿ ಮೂಲಭೂತವಾದಿಗಳ ಛಿದ್ರಕಾರೀ ಬೇಡಿಕೆಗಳನ್ನು ಮನ್ನಿಸುತ್ತಾ ಹೋದಲ್ಲಿ ಭಾರತ ಯಾರಿಗೆ ? ಎಂಬ ಅಂತಿಮ ತರ್ಕದಲ್ಲಿ ಉದ್ಭವಿಸುವ ಪ್ರಶ್ನೆಗೆ ನಾವು ಉತ್ತರಿಸಿಕೊಳ್ಳಬೇಕಾಗುತ್ತದೆ. ಜನತೆಯ ಅಸಮಾಧಾನದ ಪ್ರತೀಕವಾಗಿ ಉಗಮಿಸುವ ಪ್ರಜಾಸತ್ತಾತ್ಮಕ, ಹೋರಾಟಗಳನ್ನು ಹತ್ತಿಕ್ಕಲು ಒಡೆದು ಆಳುವ ನೀತಿಯನ್ನೂ, ಬ್ರಿಟಿಷ್ ಸರಕಾರವು ತನ್ನ ಆಳ್ವಿಕೆಯನ್ನು ಭದ್ರಪಡಿಸಲು ಅನುಸರಿಸಿತ್ತು. ಇಂದಿನ ಆಳುವ ಭೂಮಾಲೀಕ – ಬೂರ್ಜ್ವಾ ಪ್ರಭುತ್ವವೂ ಸಹ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಇದೇ ನೀತಿಯನ್ನು ಅನುಸರಿಸುತ್ತಿರುವುದು ಸ್ಪಷ್ಟ. ಕೇವಲ ಸಂವಿಧಾನಾತ್ಮಕವಾಗಿ ಜಾತ್ಯತೀತ ರಾಷ್ಟ್ರವೆಂದು ಘೋಷಿಸಿ ಈ ರೀತಿ ಧರ್ಮದ ಆಧಾರದ ಮೇಲೆ ವೈಯಕ್ತಿಕ ಕಾನೂನುಗಳನ್ನು ಮಾಡುವುದು ಮತ್ತು ಮೂಲಭೂತವಾದಿಗಳ ವಿರುದ್ಧ ಯಾವುದೇ ಬಿಗಿ ನಿಲುವನ್ನು ತೆಗೆದುಕೊಳ್ಳದಿರುವುದು ನಾಚಿಕೆಗೇಡು. ಆದ್ದರಿಂದ ಧರ್ಮವನ್ನು ಪ್ರಭುತ್ವದಿಂದ ಬೇರ್ಪಡಿಸಬೇಕು.

"ಸಾಮಾನ್ಯ ಸಿವಿಲ್ ಕೋಡ್" ಕೇಳುತ್ತಿರುವ ಹಿಂದೂ ಮೂಲಭೂತವಾದಿಗಳಾದ ಆರ್ ಎಸ್ ಎಸ್‌ನವರಾಗಲೀ ಬಿ ಜೆ ಪಿ ಯವರಾಗಲಿ, ಮಹಿಳೆಯ ಸ್ಥಿತಿಗತಿಗಳ ಬಗ್ಗೆಯ ಕಾಳಜಿಯಿಂದಲ್ಲವೆಂಬುದನ್ನು ನಾವು ಗುರುತಿಸಬೇಕಾದ್ದು. ಏಕೆಂದರೆ ತಮ್ಮ ಧರ್ಮದಲ್ಲಿಯೂ ಅನಧಿಕೃತ ಬಹುಪತ್ನಿತ್ವ ಮತ್ತು ವಿವಾಹ ವಿಚ್ಛೇದನಗಳನ್ನು ತಡೆ ಹಿಡಿಯಲಾರದೆ ಮುಂದುವರಿಸಿಕೊಂಡು ಹೋಗುತ್ತಿರುವ ಇವರ ಕಾಳಜಿ, ಬೇರೆಯ ವರ್ಗದ್ದೇ ಆಗಿದೆ

ಜಾಫರ್ ಶರೀಫರು ಹಿಡಿದ ಗುತ್ತಿಗೆ

(ಲೋಕ ಸಭೆಯಲ್ಲಿ ಕಾ|| ಸೈಫುದ್ದೀನ್ ಚೌಧುರಿಯವರು ಭಾಷಣ ಮಾಡುತ್ತಿದ್ದಾಗ ನಡೆದ ಚಕಮಕಿ)

ಸೈಫುದ್ದೀನ್ ಚೌಧುರಿ :

ಯಾವುದೇ ಧರ್ಮ, ಸಮುದಾಯ ಅಥವಾ ವ್ಯವಸ್ಥೆಯು ಗುತ್ತಿಗೆಯನ್ನು ನಮ್ಮ ದೇಶದಲ್ಲಿ ಯಾರಿಗೂ ವಹಿಸಿಕೊಡಲಾಗಿಲ್ಲ ಮುಸ್ಲಿಂ ಸಮುದಾಯಕ್ಕೆ ಸೇರಿದ ಸಾಮಾನ್ಯ ಜನ ಯಾವ ಕಟಾಚಾರಗಳನ್ನೂ ಆಚರಿಸುತ್ತಿಲ್ಲ. ಆದರೆ ತಪ್ಪು ಅರ್ಥಗಳನ್ನು ಸೃಷ್ಟಿಸಿ ಆ ಮೂಲಕ ಜನಸಾಮಾನ್ಯರನ್ನೂ ಸಮುದಾಯವನ್ನು ಶೋಷಿಸುವ ರೋಗಗ್ರಸ್ತ ಮನಸ್ಸಿನ ಕೆಲವು ವ್ಯಕ್ತಿಗಳು ನಮ್ಮಲ್ಲಿದ್ದಾರೆ.

ಸಿ. ಕೆ. ಜಾಫರ್ ಶರೀಫ್ :

ಸ್ವಾಮಿ. ನಾನೊಂದು ವಿಧಿ ಬಂದು ಎತ್ತುತ್ತಿದ್ದೇನೆ. ಈ ಮಹಾಶಯರು ಒಂದು ಧರ್ಮವನ್ನು ಪಾಲಿಸಿಕೊಂಡು ಬರುವ ಮತ್ತು ಅದನ್ನು ಪ್ರಚಾರ ಮಾಡುವ ಮೂಲಭೂತ ಹಕ್ಕನ್ನೇ ಪ್ರಶ್ನಿಸಿದ್ದಾರೆ. ಧರ್ಮ ಯಾರ ಗುತ್ತಿಗೆಯೂ ಅಲ್ಲ ಎನ್ನುವ ತನ್ನದೇ ಅಭಿಪ್ರಾಯವನ್ನು ನಮ್ಮ ಮೇಲೆ ಹೇರಲು ಅವರಿಗೆಷ್ಟು ಧೈರ್ಯ ! ನನ್ನ ಧರ್ಮದ ಮೇಲೆ ನನಗೆ ಹಕ್ಕಿದೆ. ಅದರಲ್ಲಿ ವಿಶ್ವಾಸ ಮತ್ತು ನಂಬುಗೆಯು ಇದೆ. ಪ್ರಪಂಚದಲ್ಲಿ ಯಾವನೂ ನನಗೆ ಸವಾಲೆಸೆಯಲಾರ. ಆದರೆ ಧರ್ಮದ ಮೇಲೆ ಯಾರಿಗೂ ಗುತ್ತಿಗೆ ಇಲ್ಲ ಎನ್ನಲು ಇವರಿಗೆ ಅಧಿಕಾರ ಇಲ್ಲ.

ಸೈಫುದ್ದೀನ್ ಚೌಧುರಿ

ನಿಜ, ನನಗೆ ಯಾವುದರ ಮೇಲೂ ಏಕಸ್ವಾಮ್ಯ ಇಲ್ಲ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ. ಆದರೆ ನಿಮಗೆ ಅಂತಹ ಏಕಸ್ವಾಮ್ಯ ಇದೆಯೆಂದು ನೀವು ಹೇಳುತ್ತಿದ್ದೀರಿ ಈ ವಿಷಯ ಎಲ್ಲ ಮುಸ್ಲಿಮರಿಗೂ ಗೊತ್ತಾಗಲಿ. ದೇಶದ ಇಡೀ ಮುಸ್ಲಿಂ ಸಮುದಾಯದ ಮೇಲೆ ನಿಮಗೆ ಏಕಸ್ವಾಮ್ಯ ಇದೆಯೆನ್ನುವುದು ಎಲ್ಲರಿಗೂ ತಿಳಿಯಲಿ.

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ದಾರಿ

ಯಾವ ಧರ್ಮವೇ ಆಗಲಿ ವರ್ಗಾಧಾರದಲ್ಲಿ ಮತ್ತು ಲಿಂಗಾಧಾರದಲ್ಲಿ ಅಸಮಾನತೆಯನ್ನು ಪ್ರತಿಪಾದಿಸಿ ಶೋಷಣೆಗೆ ಎಡೆ ಮಾಡಿ ಕೊಡುತ್ತಿರುವುದನ್ನು ಈ ಮೇಲ್ಕಂಡ ರೀತಿಯಲ್ಲಿ ಗುರ್ತಿಸಿರುವುದರಿಂದ ಜನಪರ ದೃಷ್ಟಿಕೋನವನ್ನು ಪಡೆದಿರುವ ನಮ್ಮ ಅ ಭಾ ಪ್ರ. ಸ. ಮಹಿಳಾ ಸಂಘಟನೆಯು ಈ ಶೋಷಣೆಯ ಮೂಲಗಳಿಗೆ ಎಡೆ ಮಾಡಿ ಕೊಡುವುದಿಲ್ಲ. "ಶರಿಯತ್" ಅಥವಾ ಅದರ ಆಧಾರದಲ್ಲಿ ರಚಿತವಾಗಿರುವ "ಮುಸ್ಲಿಂ ವೈಯಕ್ತಿಕ ಕಾನೂನು" ಇವುಗಳು ಮಹಿಳೆಯ ಶೋಷಣೆಯ ಆಕರಗಳಾದ ಬಹುಪತ್ನಿತ್ವ, ವಿವಾಹ ವಿಚ್ಛೇದನ, ಆಸ್ತಿ ಮತ್ತು ಮಕ್ಕಳ ಮೇಲಿನ ಹಕ್ಕುಗಳಲ್ಲಿಯ ಅಸಮಾನತೆಗಳನ್ನು ಪ್ರತಿಪಾದಿಸುತ್ತಿರುವುದರಿಂದ ಇವುಗಳ ವಿರುದ್ಧ ನಾವು ಪ್ರತಿಭಟಿಸುತ್ತೇವೆ.

ಬದಲಾಗುತ್ತಿರುವ ಸುತ್ತಲ ಪರಿಸರಕ್ಕನುಗುಣವಾಗಿ ಬದಲಾಗುತ್ತಿರುವ ಹೆಣ್ಣು ಇನ್ನೆಷ್ಟು ಕಾಲವು ವರ್ಗ ಸಮಾಜದ ತತ್ಪರಿಣಾಮವಾಗಿ ಉದ್ಭವವಾಗಿರುವ ಪುರುಷ ಪ್ರಧಾನ್ಯತೆಯ ದಬ್ಬಾಳಿಕೆಗೆ ಒಳಪಟ್ಟು ಇರಲಾರಳು. ಮಾನವೀಯ ಹಕ್ಕುಗಳಿಗಾಗಿ ಪ್ರಜಾಸತ್ತಾತ್ಮಕ ಮೌಲ್ಯಗಳಿಗಾಗಿ ಸ್ಪಂದಿಸುವ ಇತರೆಲ್ಲ ದಬ್ಬಾಳಿಕೆಗೆ ಒಳಗಾದ ಜನಗಳ ಮಹಾಸಾಗರದಲ್ಲಿ ಸೇರಿಕೊಳ್ಳುವಳು. ಅವರೆಲ್ಲರ ಸಮಸ್ಯೆಗಳೊಡನೆ ತನ್ನದನ್ನು ಸಮ್ಮಿಳಿಸಿ ಅವರ ಸಹಕಾರವನ್ನು ತಾನೂ ಪಡೆದು ತನ್ನನ್ನು ಆವರಿಸಿರುವ ಪಾಳೆಯಗಾರಿ ಮೌಲ್ಯಗಳ ನಿಶೆಯಿಂದ ಮುಕ್ತಳಾಗುತ್ತಾಳೆ ತನ್ನನ್ನು ಬಂಧಿಸಿರುವ ಸಂಕೋಲೆಗಳನು ಕಿತ್ತೊಗೆದು ಒಟ್ಟಾರೆ ಶೋಷಣಾರಹಿತವಾದ ಸಮಾಜ ನಿರ್ಮಾಣಕ್ಕಾಗಿ ತುಡಿಯುತ್ತಾಳೆಂಬುದಕ್ಕೆ, ಪ್ರಥಮ ಹೆಜ್ಜೆಯಾಗಿ ಈಚೆಗೆ ಧರ್ಮ ಕಾನೂನುಗಳ ಮೂಲಕ ತನಗಾಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸಿರುವುದೇ ಸಾಕ್ಷಿ.

ಖುರಾನ್ ಅನ್ನು ಸಹಸ್ರಾರು ವರ್ಷಗಳಿಂದ ನೂರಾರು ವಿಧದಲ್ಲಿ ವ್ಯಾಖ್ಯಾನಿಸಲಾಗಿದೆ. ಅದಲ್ಲದೆ ಶರಿಯತ್‌ನಲ್ಲೂ 8-10 ತಿಯತ್‌ಗಳಿವೆಯೆಂಬುದು [illegible] ಎಂದು ಕೆಲ ಮುಸ್ಲಿಂ ನಾಯಕರೇ ಒಪ್ಪಿಕೊಳ್ಳುತ್ತಾರೆ. ನಮ್ಮ ಧರ್ಮವೆಂಬ ನಂಬಿಕೆ ಇಟ್ಟಿರುವ ಮುಗ್ಧ ಜನರನ್ನು ಧರ್ಮದ ಹೆಸರಿನಲ್ಲಿ ಮೂಲಭೂತವಾದಿಗಳು ನಿಯಂತ್ರಿಸುತ್ತಿದ್ದಾರೆ. ಉದಾ:– 1982 ರಲ್ಲಿ ಮಹಿಳೆಯರು ಚಲನ ಚಿತ್ರ ನೋಡುವುದು ಧರ್ಮಬಾಹಿರವೆಂದು ಹೇಳಿ ನೋಡಲು ಹೋದ ಮಹಿಳೆಯರ ತಲೆ ಕೂದಲನ್ನು ಕತ್ತರಿಸುವ ಆದೇಶವನ್ನು ಹೊರಗಿದ್ದನ್ನು ನಾವು ಕಂಡಿದ್ದೇವೆ. ಈ ರೀತಿ ಧರ್ಮವನು ನಂಬಿದ ಮುಗ್ಧ ಜನರು ಧರ್ಮದ ಕುಟಿಲ ಗುಟ್ಟನ್ನು ತಿಳಿಯದೆ, ತಮ್ಮ ಮೇಲಾಗುವ ಅನ್ಯಾಯಗಳಿಂದ ದಿಗ್ಮೂಢರಾಗಿದ್ದಾರೆ.

ಮೂಲಭೂತವಾದಿಗಳು ಎಡ ಪ್ರಜಾಸತ್ತಾತ್ಮಕ ಚಳುವಳಿಯನ್ನು ದಗ್ಗಳಿಯಲು ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಭಾರತದ ಜನವಿರೋಧಿ ಪ್ರಭುತ್ವವು ತನ್ನ ದಿವಾಳಿಕೋರ ಧೋರಣೆಗಳಿಂದಾಗಿ ಇಂತಹ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತಿದೆ. ಉದಾ:- ಪಂಜಾಬಿನಲ್ಲಿ ಭಿಂದ್ರನ್‌ವಾಲೆಯಂತಹ, ಅಸ್ಸಾಮಿನಲ್ಲಿ ಎ.ಎ ಎಸ್. ಯು ದಂತಹ, ವಿಚ್ಛಿದ್ರಕ ಶಕ್ತಿಗಳನ್ನು ಆಳುವ ವರ್ಗದ ಪ್ರತಿನಿಧಿಯಾಗಿರುವ ಕಾಂಗ್ರೆಸ್ ಹುಟ್ಟು ಹಾಕಿತು. ಈಗ ಅವುಗಳೇ ಕಾಂಗ್ರೆಸ್‌ಗೆ ಮುಳುವಾಗಿ ನಿಂತಿವೆ. ಏಕೆಂದರೆ ಇಂತಹ ಶಕ್ತಿಗಳು ಅಂತಿಮವಾಗಿ ಸಾಮ್ರಾಜ್ಯಶಾಹಿಗಳ ಹಿತವನ್ನು ಕಾಯುವಂತಹವಾಗಿವೆ. ಸಾಮ್ರಾಜ್ಯಶಾಹಿಗಳಿಗೆ ಭಾರತ ಒಡೆದು ಛಿದ್ರವಾಗುವುದು ಬೇಕು. ಅಂದರೆ ಇಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯದಂತಾಗಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ತಡೆಯಲು ಸಾಧ್ಯ ಎನ್ನುವ ತಂತ್ರ ಅವರದು. ಈ ಕುಯುಕ್ತಿಗೆ ಪೂರಕವಾಗಿ ಭಾರತದ

(6ನೇ ಪುಟ ನೋಡಿ)

ಖುರಾನ್‌ನಲ್ಲಿ ವಿಚ್ಛೇದನ ಪ್ರಕರಣ

(ಲೋಕ ಸಭೆಯಲ್ಲಿ ಕಾ|| ಸೈಫುದ್ದೀನ್ ಚೌಧುರಿ)

ಅಯಾತ್ 241 ರಲ್ಲಿ ಪವಿತ್ರ ಕುರಾನ್ ಹೀಗೆ ಹೇಳುತ್ತದೆ– "ವಿವಾಹ ವಿಚ್ಛೇದನ ನೀಡಲಾದ ಮಹಿಳೆಗೆ ಸೂಕ್ತ ಪ್ರಮಾಣದಲ್ಲಿ ಜೀವನಾಂಶ ನೀಡಬೇಕು ಇದು ಸನ್ಮಾರ್ಗಿಗಳ ಕರ್ತವ್ಯ". ಈ ಮಾತುಗಳಲ್ಲಿ ಯಾವುದೇ ಅಸ್ಪಷ್ಟತೆ ಇಲ್ಲ.

ಅಯಾತ್ 242 ಈ ರೀತಿ ಹೇಳುತ್ತದೆ, "ನೀನು ಸರಿಯಾಗಿ ತಿಳಿದುಕೊಳ್ಳಲಿ ಎಂಬ ಉದ್ದೇಶದಿಂದ ದೇವರು ತನ್ನ ಕುರುಹುಗಳನ್ನು ಈ ರೀತಿ ಸ್ಪಷ್ಟಪಡಿಸುತಿದ್ದಾನೆ" ಬಹುಶಃ ಕೆಲವು ಜನ ತನ್ನ ಕುರುಹುಗಳನ್ನು ಅರ್ಥ ಮಾಡಿಕೊಳ್ಳುವಂತೆ ಮಾಡುವಲ್ಲಿ ಭಗವಂತ ಕೂಡಾ ಸೋತಿದ್ದಾನೆ ಅಂತ ನನಗನಿಸುತ್ತೆ.

ಜೀವನಾಂಶವನ್ನು 'ಇದ್ದತ್' ವರೆಗೆ ಕೊಟ್ಟರೆ ಸಾಕೆಂದು ಈಗ ಕೆಲವು ಜನ ಹೇಳ್ತಾ ಇದ್ದಾರೆ, ವಾಸ್ತವವಾಗಿ 'ಇದ್ದತ್' ಅಂದರೆ ಏನು? ಸುರತ್-ಅಲ್-ತಲಾಖ್ ಈ ರೀತಿ ಹೇಳುತ್ತದೆ.

"ನೀನು ಹೆಂಡತಿಗೆ ವಿಚ್ಛೇದನ ನೀಡಲೇ ಬೇಕಾದಾಗ ಆಕೆಗೆ ಮುಕ್ತ ಸ್ಥಿತಿಯಲ್ಲಿ (ಅಂದರೆ ಗರ್ಭವತಿ ಅಥವಾ ರಜಸ್ವತಿಯಾಗಿಲ್ಲದಿರುವಾಗ) ವಿಚ್ಛೇದನ ನೀಡು. ಅವರನ್ನು ಮನೆಯಿಂದ ಹೊರಗೆ ಅಟ್ಟದಿರು. ಭಗವಂತ ನಿಮ್ಮ ನಡುವೆ ಹೊಂದಾಣಿಕೆ ಬರುವಂತೆ ಮಾಡಲೂ ಬಹುದು."

ಹೀಗೆ ಹೆಂಗಸರು "ಮುಕ್ತ ಸ್ಥಿತಿ"ಯಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ಮುಂದಿನ ಭಾಗ ಹೀಗೆ ಹೇಳುತ್ತದೆ. "ಅವರು ಈ ನಿರ್ದಿಷ್ಟಪಡಿಸಿದ ಅವಧಿಯನ್ನು ಮುಗಿಸಿದಾಗ ಒಂದೋ ಅವರನ್ನು ಸಹಾನುಭೂತಿಯಿಂದ ನಿನ್ನ ಬಳಿ ಇರಿಸಿಕೋ ಇಲ್ಲವೇ ನ್ಯಾಯವಾದ ರೀತಿಯಲ್ಲಿ, ಸಭ್ಯತನದಿಂದ ಬೀಳ್ಕೊಡು.

ಗರ್ಭಿಣಿಯಾದ ಹೆಂಗಸನ್ನು ಹೊರತು ಪಡಿಸಿ ಉಳಿದವರಿಗೆ ನಿರ್ದಿಷ್ಟಪಡಿಸಲಾದ ಈ ಕಾಯುವ ಅವಧಿ ಮೂರು ತಿಂಗಳು ಗರ್ಭಿಣಿ ಹೆಂಗಸು ತನ್ನ ಬಾಣಂತನ ಪೂರೈಸುವವರೆಗೂ ಈ ಅವಧಿ ಮುಂದುವರಿಯುತ್ತದೆ.

ಈ ಕಾಯುವ ಅವಧಿ ಯಾಕೆ ? ಇದು ಜೀವನಾಂಶ ನೀಡುವುದಕ್ಕೆ ಸರ್ವಥಾ ಅಲ್ಲ ; ಬದಲು ಮರು ಹೊಂದಾಣಿಕೆಗೆ. ಅಲ್ಲಾಹ್ ಹೀಗೆ ಹೇಳುತ್ತಾನೆ "ಅವರಿಗೆ (ಇದ್ದತ್‌ನಲ್ಲಿ ಇರುವ ಮಹಿಳೆಯರಿಗೆ) ನೀನಿರುವ ನೆಲೆಯಲ್ಲೇ ವಾಸ್ತವ್ಯ ನೀಡು, ನೀನು ಬದುಕುವ ಶೈಲಿಯಲ್ಲೇ ಅವರನ್ನೂ ಬದುಕಗೊಡು"

ಈ ರೀತಿ 'ಇದ್ದತ್' ಎನ್ನುವುದು ಮರುಹೊಂದಾಣಿಕೆಗಾಗಿ ಇರುವ ಕಾಲಾವಧಿ, ಜೀವನಾಂಶದ ಪ್ರಶ್ನೆ ಬರುವುದು ಇದರ ನಂತರ ಅಷ್ಟೆ.

'ಇದ್ದತ್' ನ ಅವಧಿ ಅಂದರೆ ಸಾಮಾನ್ಯವಾಗಿ ತಿಳಿದಿರುವಂತೆ ಮೂರು ತಿಂಗಳ ಕಾಲಾವಧಿ ಇರುವುದು ಮರು ಹೊಂದಾಣಿಕೆಗೆ ಹೊರತು ಜೀವನಾಂಶ ನೀಡುವುದಕ್ಕಲ್ಲ. ಅದನ್ನು ಮರು ಹೊಂದಾಣಿಕೆಗಾಗಿಯೇ ನಿರ್ದಿಷ್ಟಪಡಿಸಲಾಗಿದೆ ಎಂದು ನನ್ನ ಅಭಿಮತ ಕೂಡಾ.

ಭಾರತ ಬಂದ್ ಅಂಗವಾಗಿ ರಾಯಚೂರಿನಲ್ಲಿ ಬಹಿರಂಗ ಸಭೆ

ಕಾ|| ಪಿ. ರಾಮಚಂದ್ರರಾವ್ ಭಾಷಣ

ರಾಯಚೂರಿನಲ್ಲಿ ಸಿ ಪಿ ಐ [ಎಂ] ಕಾರ್ಯಕರ್ತರು ಪಕ್ಷದ ಕಛೇರಿಯಿಂದ ಹೊರಟು ಮೆರವಣಿಗೆಯು ಮುಖಾಂತರ ಕರ್ನಾಟಕ ಸಂಘದಿಂದ ಜನತಾ ಹಾಗೂ ಬಿ.ಜೆ.ಪಿ ಕಾರ್ಯಕರ್ತರೊಡನೆ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ನಡೆಸಿದರು.

ಸಾಯಂಕಾಲ 7 ಘಂಟೆಗೆ ಮಹಿಳಾ ಸಮಾಜ ಮೈದಾನದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು.

ಜನತಾ ಪಕ್ಷದ ಜಿಲ್ಲಾ ಅಧ್ಯಕ್ಷರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾಂ. ಚಂದ್ರಶೇಖರಬಾಳೆ (ಕಾರ್ಯದರ್ಶಿ ಜಿಲ್ಲಾ ಸಮಿತಿ)ಯವರು ಸ್ವಾಗತ ಕೋರಿದರು, ಜನತಾ ಹಾಗೂ ಬಿ.ಜೆ.ಪಿ. ಮುಖಂಡರು ಕಾಂಗ್ರೆಸ್ಸಿನ ಬೆಲೆ ಯೇರಿಕೆ ಧೋರಣೆಯನ್ನ ಖಂಡಿಸಿದರು ವಿಶೇಷವಾಗಿ ಹಾಜರಿದ್ದ ಕಾ ಪಿ ರಾಮಚಂದ್ರರಾವ್, ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿಗಳು, ಕಾಂಗ್ರೆಸ್ಸಿನ ಬಂಡವಾಳಶಾಹಿ ಧೋರಣೆಯಿಂದಾಗಿ ಸ್ವಾತಂತ್ರ್ಯ ನಂತರ ಗುತ್ತೇದಾರಿ ಬಂಡವಾಳ ಶಾಹಿಗಳು ಬಲಿಷ್ಟವಾಗಿ ಬೆಳೆಯುವ ದರೊಟ್ಟಿಗೆ, ಅಮೇರಿಕನ್ ಸಾಮ್ರಾಜ್ಯಶಾಹಿಗಳ ಆರ್ಥಿಕ ಹಿಡಿತ ಹೇಗೆ ಹೆಚ್ಚಾಗುತ್ತಿದೆ ಎಂದು ವಿವರಿಸಿ, ಪಂಚವಾರ್ಷಿಕ ಯೋಜನೆಗಳು, ಪ್ರತಿವರ್ಷದ ಮುಂಗಡ ಪತ್ರವು ಸಾಮ್ರಾಜ್ಯಶಾಹಿ ನಿರ್ದೇಶನದಲ್ಲಿ ನಡೆಯುವಂತಾಗಿದೆ ಎಂದು ವಿವರಿಸಿ, ಗುತ್ತೇದಾರಿ ಶ್ರೀಮಂತರಿಗೆ ಹೆಚ್ಚೆಚ್ಚು ಸೌಲಭ್ಯಗಳನ್ನು ಕೊಡುತ್ತಾ, ಜನಸಾಮಾನ್ಯರ ಮೇಲೆ ಭಾರವನ್ನು ಹೇರುತ್ತಿದ್ದು, ಪ್ರತ್ಯಕ್ಷ ತೆರಿಗೆಯನ್ನು ಕಡಿಮೆ ಮಾಡುತ್ತಾ ಅಪ್ರತ್ಯಕ್ಷ ತೆರಿಗೆಯನ್ನು ಹೆಚ್ಚಿಚ್ಚು ಮಾಡುವುದರಿಂದ, ಬೆಲೆಗಳು ದಿನೇದಿನೇ ಹೆಚ್ಚುತ್ತಲೇ ಹೋಗುತ್ತಿವೆ ಇಂದು ಸ್ವಾತಂತ್ರ ಭಾರತದಲ್ಲಿ 89 ರಷ್ಟು ಅಪ್ರತ್ಯಕ್ಷ ತೆರಿಗೆಯನ್ನು ಹೇರಲಾಗುತ್ತಿದ್ದು, ಬಡವ ಶ್ರೀಮಂತರ ಮಧ್ಯೆ ತೀವ್ರ ಅಂತರ ಹೆಚ್ಚಾಗಿದೆ. ದುಡಿಯುವ ಜನತೆ ಇಂದು ರಾಷ್ಟ್ರವ್ಯಾಪ್ತಿಯಾಗಿ ತಮ್ಮ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಇಷ್ಟು ಮಾತ್ರ ಸಾಲದು, ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ, ಚುನಾವಣೆಯಲ್ಲಿ ಮತ ಚಲಾವಣೆ ಮಾಡಿ, ನಂತರದಲ್ಲಿ ಆಳುವ ಪಕ್ಷ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸಲು ಒತ್ತಾಯಿಸಬೇಕು ಇಲ್ಲದಿದ್ದರೆ ಪ್ರಜಾಪ್ರಭುತ್ವದ ಪ್ರತಿಫಲ ಪಡೆಯಲಾಗುವುದಿಲ್ಲ, ಇಂದು ಆ ಹಿನ್ನೆಲೆಯಲ್ಲಿ 26 ನೇ ಫೆಬ್ರುವರಿ, ಜನವಿರೋಧಿ ನೀತಿ ಹೊಸ ಆರ್ಥಿಕ ನೀತಿಯಿಂದಾಗಿ ಬೆಲೆಗಳನ್ನು ಹೆಚ್ಚಿಸಲಾಗಿದೆ. ಇದನ್ನು ರಾಷ್ಟ್ರವ್ಯಾಪಿಯಾಗಿ ಪ್ರತಿಭಟಿಸಿ ಸರ್ವಾಧಿಕಾರಿ ಶಕ್ತಿಯನ್ನು ದಮನ ಮಾಡಿ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸ ಬೇಕಾಗಿದೆ ಎಂದು ಕರೆಕೊಟ್ಟರು

ಸಾಟಿಯಿಲ್ಲದ ಧೀಮಂತ ಹೋರಾಟ

(2ನೇ ಪುಟದಿಂದ)

ಕಾರ್ಯಕರ್ತರೂ ಕಾಲಸು ಕ್ರಮದಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿಕೊಂಡರು. ಈ ಬಂಡಾಯ ಐದು ವರ್ಷಗಳ ಕಾಲ ಮುಂದುವರಿದಿದ್ದರೆ ಮತ್ತು ಅದು ಭೂ ಸಂಬಧದ ಪ್ರಶ್ನೆಯನ್ನು ಅಗ್ರಮಾನ್ಯ ಪ್ರಶ್ನೆಯಾಗಿ ಪರಿವರ್ತಿಸಿದ್ದರೆ ಅದಕ್ಕೆ ಈ ಹೋರಾಟ ಕಮ್ಯುನಿಸ್ಟರ ನೇತೃತ್ವದಲ್ಲಿದ್ದುದೇ ಕಾರಣ

ಗ್ರಾಮ ರಾಜ್ಯ

ತೆಲಂಗಾಣ ರೈತರ ಸಶಸ್ತ್ರ ಬಂಡಾಯದ ಸಾಧನೆಗಳೂ ಸಾಕಷ್ಟಿವೆ. ಈ ಹೋರಾಟದ ಫಲವಾಗಿ ನಲಗೊಂಡ, ವಾರಂಗಲ್ ಮತ್ತು ಕಮ್ಮಮ್ ಜಿಲ್ಲೆಗಳೇ ಮುಖ್ಯವಾಗಿರುವಂತೆ ಸುಮಾರು 3000 ಹಳ್ಳಿಗಳಲ್ಲಿ ಗ್ರಾಮರಾಜ್ಯ ಪದ್ಧತಿಯನ್ನು ಜ್ಯಾರಿಗೆ ತರಲಾಯಿತು. ಸುಮಾರು 16,000 ಚದರ ಮೈಲಿ ವಿಸ್ತಾರದ ಈ ಪ್ರದೇಶದಲ್ಲಿ ಮೂರು ಮಿಲಿಯ ಜನ ಸಮಿತಿಲ ಗ್ರಾಮ ಪಂಚಾಯಿತಿಗಳನ್ನು ರೂಪಿಸಿಕೊಂಡು ಅವುಗಳ ಮುಖಾಂತರ ಹೋರಾಟ ಮುಂದುವರಿಸಿದರು. ನಿಜಾಂ ಆಡಳಿತೆಯ ಆಧಾರಸ್ತಂಭಗಳಾಗಿದ್ದ ದುಷ್ಟ ಭೂಮಾಲಕರನ್ನು ಅದರ ಭದ್ರ ಕೋಟೆಗಳಿಂದ ಹೊಡೆದೋಡಿಸಿದ ರೈತರು ಅವರ ಜಮೀನನ್ನು ವಶಪಡಿಸಿಕೊಂಡಿದ್ದರು.

ಜನತಾ ಸಮಿತಿಗಳ ಮುಂದಾಳುತ್ವದಲ್ಲಿ ಸುಮಾರು ಹತ್ತು ಲಕ್ಷ ಎಕರೆ ಭೂಮಿಯನ್ನು, ಭೂಹೀನ ರೈತಾಪಿ ಜನರ ನಡುವೆ ಹಂಚಲಾಯಿತು ಬಿಟ್ಟಿ ದುಡಿಮೆಯನ್ನು ಒಕ್ಕಲೆಬ್ಬಿಸುವುದನ್ನು ನಿಷೇಧಿಸಲಾಯಿತು. ಅತಿರೇಕವಾಗಿದ್ದ ಬಡ್ಡಿ ದರಗಳನ್ನು ಕಡಿತ ಮಾಡಲಾಯಿತಲ್ಲದೆ ಹೆಚ್ಚಿನ ಕಡೆ ಬಡ್ಡಿ ಸಾಲಗಳನ್ನು ರದ್ದುಪಡಿಸಲಾಯಿತು. ಕೃಷಿ ಕಾರ್ಮಿಕರ ಕನಿಷ್ಟ ವೇತನವನ್ನು ನಿಗದಿ ಮಾಡಿ ಅದನ್ನು ಕಡ್ಡಾಯವಾಗಿ ಜ್ಯಾರಿಗೆ ತರಲಾಯಿತು ಕ್ರೂರಿಗಳಾಗಿದ್ದ ಅರಣ್ಯಾಧಿಕಾರಿಗಳನ್ನು ಹೊಡೆದೋಡಿಸಿ ಅರಣ್ಯ ಪ್ರದೇಶವನ್ನು ಬುಡಕಟ್ಟು ಜನರಿಗೂ ಅರಣ್ಯದ ಬಳಿ ವಾಸಿಸಿರುವ ಜನರ ಉಪಯೋಗಕ್ಕೂ ಬಿಟ್ಟುಕೊಡಲಾಯಿತು. ಸುಮಾರು 12 ರಿಂದ 18 ತಿಂಗಳ ವರೆಗೆ ಈ ಪ್ರದೇಶದ ಆಡಳಿತ ಹಳ್ಳಿಗಳ ರೈತ ಸಮಿತಿಯ ನಿಯಂತ್ರಣದಲ್ಲೇ ಇದ್ದಿತು. ಲಕ್ಷಾಂತರ ರೈತರಿಗೆ ತಮ್ಮ ಬದುಕಿನಲ್ಲಿ ಮೊದಲ ಬಾರಿಗೆ ಎರಡು ಹೊತ್ತಿನ ಊಟ ದೊರೆತದ್ದು ತೆಲಂಗಾಣ ಹೋರಾಟದ ಸಮಯದಲ್ಲೇ. ರಜಾಕಾರರ ಧಾಳಿಯನ್ನು ಎದುರಿಸಲು ಸದಾ ಸಿದ್ಧರಾಗಿದ್ದ ಎರಡು ಸಾವಿರ ಮಂದಿ ಗೆರಿಲ್ಲಾಗಳನ್ನು ಒಳಗೊಂಡಂತೆ ಸುಮಾರು 10,000 ಹಳ್ಳಿಗಳಲ್ಲಿ ಹೋರಾಟಗಾರರ ತಂಡಗಳನ್ನು ತರಬೇತಿಗೊಳಿಸಲಾಗಿತ್ತು. ತೆಲಂಗಾಣ ರೈತರ ಬಂಡಾಯ ನವಾಬಶಾಹಿಯ ಅಧಿಪತ್ಯವನ್ನು ಬುಡಸಮೇತ ಅಲ್ಲಾಡಿಸಿ ಅದಕ್ಕೆ ಮರಣಾಂತಿಕ ಪೆಟ್ಟು ನೀಡಿತ್ತು. ●

ಬರಗಾಲ ಪರಿಹಾರಕ್ಕಾಗಿ ಬೃಹತ್ ಸೈಕಲ್ ರ್ಯಾಲಿ

ಫೆಬ್ರುವರಿ 8, 9 ರಂದು ನಡೆದ ಕರ್ನಾಟಕದ ಪ್ರಾಂತ ರೈತ ಸಂಘದ ರಾಯಚೂರು ಜಿಲ್ಲಾ ಸಮಿತಿಯ ಸಭೆಯಲ್ಲಿ ಜಿಲ್ಲೆಯಲ್ಲಿ ಬರಗಾಲದ ಭೀಕರತೆಯನ್ನು ವಿಶೇಷವಾಗಿ ತಾಲೂಕಾವಾರು ಕಾರ್ಯಕರ್ತರು ಜಾಥಾ ನಡೆಸಿ ಸಂಗ್ರಹಿಸಿದ ಮಾಹಿತಿ, ಜನರ ಅಹೋತ್ರರಗಳ ಕುರಿತು ವರದಿಯನ್ನು ಸಮಿತಿ ಸಂಗ್ರಹಿಸಿತು. ಒಂದೆಡೆ ಬರಗಾಲ, ಇನ್ನೊಂದೆಡೆ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದ್ದು, ಹೆಚ್ಚಿನ ಹಣವನ್ನು ಅರಣ್ಯ ಇಲಾಖೆಗೆ ಮಂಜೂರಿ ಮಾಡಿದ್ದು ಅದರಿಂದ ಸಾಗುವಳಿ ಮಾಡಿದ ಅರಣ್ಯ ಭೂಮಿಯಿಂದ ರೈತರನ್ನು ಹೊರ ಹಾಕಿ, ನೀಲಗಿರಿ ಸಸಿಯನ್ನು ನೆಡುತ್ತಿದ್ದು, ಮತ್ತಷ್ಟು ನೀರಿನ ಅಭಾವಕ್ಕೆ ಎಡೆಮಾಡಿ ಕೊಡುತ್ತಿದ್ದುದನ್ನು ಸಭೆ ತೀವ್ರವಾಗಿ ಪರಿಗಣಿಸಿತು. ಹಾಗೆಯೇ ಬರ ಪ್ರದೇಶದಲ್ಲಿ, ಮಳೆ ನೀರಿನ ತೀವ್ರ ಅಭಾವದ ಪರಿಚಯ ಪಡೆದ ರೈತಾಪಿ ಜನತೆ, ಫೀರಾವರಿಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ವ್ಯಾಪಕವಾಗಿ, ಸಾಂಪ್ರದಾಯಿಕ ಬೆಳೆಯಿಂದ ಹಣಕಾಸು ಬೆಳೆಯತ್ತ ವಾಲುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ವ್ಯಾಪಿಯಾಗಿ ಚಳುವಳಿಯನ್ನು ರೂಪಿಸಬೇಕೆಂದು ತೀರ್ಮಾನಿಸಲಾಯಿತು.

ಸೈಕಲ್ ರ್ಯಾಲಿ

17-3-86 ರಂದು ರಾಜ್ಯ ಸಮಿತಿ ಕರೆಯನ್ನು ಯಶಸ್ವಿಗೊಳಿಸಲು, ಬೃಹತ್ ಸೈಕಲ್ ರ್ಯಾಲಿಯನ್ನು ಜಿಲ್ಲಾಧಿಕಾರಿ ಕಚೇರಿಗೆ ಕೊಂಡೊಯ್ದು, ಧರಣಿಯನ್ನು ನಡೆಸಿ ಅಂತಿಮ ಮನವಿಯನ್ನು ಸಲ್ಲಿಸಲು ತೀರ್ಮಾನಿಸಲಾಯಿತು.

ಸಮ್ಮೇಳನಗಳು, ತರಬೇತಿ ಶಿಬಿರಗಳು

1) 18-3-86 ರಂದು ಒಂದು ದಿವಸದ ಜಿಲ್ಲಾ ಸಮ್ಮೇಳವನ್ನು ರಾಯಚೂರ ನಗರದಲ್ಲಿ ನಡೆಸುವದು.

2) ಜಿಲ್ಲೆಯ ಗಂಗಾವತಿ, ದೇವದುರ್ಗ ತಾಲೂಕು ಸಮಾವೇಶಗಳನ್ನು, ರಾಯಚೂರ, ಮಾನ್ವಿ, ಸಿಂಧನೂರು, ಲಿಂಗಸುಗೂರ, ಕುಷ್ಟಗಿ, ಯಲಬುರ್ಗ ತಾಲೂಕಾ ಸಮ್ಮೇಳನಗಳನ್ನು 14-3-86 ರೊಳಗೆ ಮುಗಿಸುವದು.

3) ಗ್ರಾಮವಾರು ತಾಲೂಕಾವಾರು ತರಬೇತಿ ಶಿಬಿರಗಳನ್ನು ನಡೆಸಿ ಮೇಲ್ಮಟ್ಟದ ತರಬೇತಿ ಶಿಬಿರಕ್ಕೆ ಕಾರ್ಯಕರ್ತರನ್ನು ತಯಾರಿ ಮಾಡುವದು.

4) ಮಾರ್ಚ್ ಕೊನೆಯೊಳಗೆ ಮೂರು ವಿಭಾಗ ಮಟ್ಟದ ತರಬೇತಿ ಶಿಬಿರಗಳನ್ನು ನಡೆಸುವದು.

5) ಏಪ್ರಿಲ್ 11, 12, 13, ರಂದು, ರಾಯಚೂರು ನಗರದಲ್ಲಿ ನಡೆಯಲಿರುವ ರಾಜ್ಯ ಸಮ್ಮೇಳನಕ್ಕೆ ವ್ಯವಸ್ಥಿತ ತಯಾರಿಯ ಕುರಿತು ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

ಈ ಸಭೆಯ ಅಧ್ಯಕ್ಷತೆಯನ್ನು ಕಾಂ. ಚಂದ್ರಶೇಖರ ಬಾಳೆ ವಹಿಸಿದ್ದರು. ಕಾಂ. ಲಿಂಗಪ್ಪ ವರದಿ ಮಂಡಿಸಿದರು

‘ಐಕ್ಯರಂಗ ನಿಧಿ’ ಸಂಗ್ರಹ

ಲೆನಿನ್‌ರವರು ಪಕ್ಷದ ಪತ್ರಿಕೆಯ ಪ್ರಾಮುಖ್ಯತೆಯ ಬಗ್ಗೆ ಮತ್ತೆ ಮತ್ತೆ ಹೇಳುತ್ತಿದ್ದುದನ್ನು ನಾವು ಈಗಾಗಲೇ ಉಲ್ಲೇಖಿಸಿದ್ದೇವೆ. ಕಾಂ ಲೆನಿನ್‌ರವರು ಪತ್ರಿಕೆಗೆ ಯಾವ ಪ್ರದೇಶದಿಂದ ಎಷ್ಟು, ಹಣಕಾಸು ಅದರಲ್ಲೂ ಕಾರ್ಮಿಕರು ತಾವು ಬೆವರು ಹರಿಸಿ ಗಳಿಸಿದ ಹಣದಿಂದ ನೀಡಿದ ಕಾಣಿಕೆ ಎಷ್ಟು ಬಂತು ಎಂಬುದರ ಆಧಾರದ ಮೇಲೆ, ಪತ್ರಿಕೆಯ ಪ್ರಸಾರದ ಆಧಾರದ ಮೇಲೆ ಪಕ್ಷದ ಬೆಳವಣಿಗೆಯನ್ನು ಅಳೆಯುತ್ತಿದ್ದರು.

ಹಿಂದಿನ ಮೊತ್ತ [ಸಂಚಿಕೆ 6 ರಿಂದ]		ರೂ.	93.0-00
ಪಿ. ರಾಮಚಂದ್ರರಾವ್ ಮೂಲಕ :		ರೂ.	1500-00
ಎಸ್. ರೇವಣ್ಣನವರ ಮೂಲಕ			
ಕೆ. ಎಲ್. ಭೂತಾಗಿ,	ನವದೆಹಲಿ	ರೂ.	100-00
ರಾಘವೇಂದ್ರರಾವ್	"	ರೂ.	25-00
ಶರ್ಮಾ,	ಹೈದರಾಬಾದ್	ರೂ.	10-00
ಸುಬ್ರಮಣ್ಯಂ,	ಗುಂಟೂರು	ರೂ.	10-00
ಸೆಲ್ವರಾಜ್,	ಕರೂರ್	ರೂ.	10-00
ವಿ ಆರ್. ನಾಯರ್,	ಮದ್ರಾಸ್	ರೂ.	10-00
ಎಸ್. ಕೊದಂಡರಾಮನ್,	ಮದ್ರಾಸ್	ರೂ.	10-00
ಸುಂದರಂ,	ಶಿವಗಿರಿ	ರೂ	10-00
ಶಿವ ಸುಬ್ರಮಣ್ಯನ್,	ಮಧುರೈ	ರೂ	10-00
ಮೀನಾಕ್ಷಿ ಸುಂದರಂ,	ತಿರುಚಿ	ರೂ.	10-00
ಎಸ್. ಎನ್. ರೆಡ್ಡಿ,	ಹೈದರಾಬಾದ್	ರೂ.	10-00
ನಾಗರಾಜನ್,	ಮದ್ರಾಸ್	ರೂ.	10-00
ಜ್ಞಾನಮಣಿ,	ಮದ್ರಾಸ್	ರೂ.	10-00
ಕೆ. ವಿ. ಜಾರ್ಜ್,	ಎರ್ನಾಕುಲಂ	ರೂ.	10-00
ಉದಯ ಒಮಾರ್,	ಕಣ್ಣಾನೂರು	ರೂ	10-00
ಬಾಲ ಚಂದ್ರನ್,	ಕೊಟ್ಟಯಂ	ರೂ.	10-00
ಶಿವಪ್ರಕಾಶನ್ ನಾಯರ್,	ತಿರುವನಂತಪುರ	ರೂ.	10-00
ಇತರರಿಂದ		ರೂ.	2000-00
ಒಟ್ಟು		ರೂ	13125-00

ಮಹಿಳೆಯರ ಹೋರಾಟ ಮತ್ತು ದೇಶದ ಐಕ್ಯತೆ

[5ನೇ ಪುಟದಿಂದ]

ಈ ವಿಚ್ಛಿದ್ರಕ ಶಕ್ತಿಗಳು ಭಾರತೀಯರನ್ನು ಹಿಂದೂ, ಮುಸ್ಲಿಂ, ದಲಿತ, ಸಿಖ್, ಎಂದೂ ಪಂಜಾಬಿ, ಅಸ್ಸಾಮಿ, ಕಾಶ್ಮೀರಿ ಎಂದೂ ವಿಭೇದಗೊಳಿಸುವ ಕೆಲಸವನ್ನು ಸತತವಾಗಿ ನಡೆಸುತ್ತಿವೆ.

ಮಹಿಳೆಯರ ವಿಮೋಚನೆ ಸಾಧ್ಯವಾಗ ಬೇಕಾದರೆ ದೇಶದ ಐಕ್ಯತೆ ಅತಿ ಮುಖ್ಯ. ದೇಶ ಅನೈಕ್ಯಗೊಂಡರೆ, ಜನತಾ ಪ್ರಜಾಪ್ರಭುತ್ವ ಚಳುವಳಿ ತನ್ನ ಕಾಲು ಕಳೆದುಕೊಳ್ಳುತ್ತದೆ. ಕೋಮು, ಪ್ರದೇಶ, ಭಾಷೆ, ಧರ್ಮ, ಜಾತಿಗಳ ಕೊಳ್ಳೆಗಳಿಗೆ ಸಿಕ್ಕಿಬಿದ್ದಿರುವ ಜನತೆಯು ವಿವಿಧ ಸಮೂಹ ಹಾಗೂ ವರ್ಗ ವಿಭಾಗಗಳು ಪ್ರಜಾಸತ್ತಾತ್ಮಕ ಚಳುವಳಿಗೆ ಧುಮುಕುವಂತೆ ಆಗಬೇಕೆನ್ನುವ ನಂಬಿಕೆ ಹೊಂದಿರುವ ನಮ್ಮ ಎ. ಐ. ಡಿ. ಡಬ್ಲ್ಯು.ಎ. "ಶರಿಯತ್" ನಂತಹ ಸಮಸ್ಯೆಯನು ಗಂಭೀರವಾಗಿ ಪರಿಗಣಿಸುತ್ತದೆ. ಶರಿಯತ್ ಒಳಗಡೆ ಅದನ್ನು ನಂಬಿರುವ ಸ್ತ್ರೀಯ ಒಡಲನ್ನು ಹರಿಯುವ ಉಗುರುಗಳಿವೆಯೆಂದು ಬಹಿರಂಗಗೊಳಿಸಬೇಕಾದ ಅವಶ್ಯಕತೆ ಇದೆ. ಶಹಾಬಾನುವಿನ ಕೂಗು ಶರಿಯತ್‌ನಡಿಯಲ್ಲಿ ಶತ- ಶತಮಾನಗಳಿಂದ ನರಳುತ್ತ ಸತುತ್ತ ಹೋದವರದನಿಗಳನ್ನೆಲ್ಲ ಒಗ್ಗೂಡಿಸಿಕೊಂಡ ಪ್ರಜಾಸತ್ತಾತ್ಮಕ ಕೂಗಾಗಿದೆ. ಈ ಕೂಗಿಗೆ ಪ್ರಜಾಸತ್ತೆಯಲ್ಲಿ ನಂಬಿಕೆ ಹೊಂದಿರುವ ಎಲ್ಲ ಶಕ್ತಿ ಹಾಗೂ ವ್ಯಕ್ತಿಗಳು ಧ್ವನಿಗೂಡಿಸಬೇಕೆಂದು ನಮ್ಮ ಸಂಘಟನೆ ಆಹ್ವಾನಿಸುತ್ತದೆ. ●

ಸೋವಿಯತ್ ಕಮ್ಯೂನಿಸ್ಟರ 27ನೇ ಮಹಾಧಿವೇಶನ

ಚೈತನ್ಯಭರಿತ ಮುನ್ನಡೆ, ಶಾಂತಿಯ ಸವಾಲು

ಸೋವಿಯತ್ ಒಕ್ಕೂಟದ ಸಮಾಜವಾದಿ ನಿರ್ಮಾಣದ ಹಾದಿಯಲ್ಲಿ ಪ್ರಮುಖ ಘಟ್ಟಗಳಲ್ಲಿ ಒಂದಾಗಲಿರುವ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನ ಪಕ್ಷದ ಮೂರನೇ ಕಾರ್ಯಕ್ರಮವನ್ನು ರೂಪಿಸಲಿದೆ.

ಅತ್ಯಂತ ಕುತೂಹಲ ಕೆರಳಿಸಿರುವ ಈ ಕಾರ್ಯಕ್ರಮ ಇಡೀ ಪಕ್ಷ, ಇಡೀ ಸೋವಿಯತ್ ಜನತೆ ತನ್ನಲ್ಲಿ ಮನೆ ಮಾಡಿದ್ದ ಅಲ್ಪ ಸ್ವಲ್ಪ ಜಡತೆಯನ್ನು ಕೊಡವಿಕೊಂಡು, ಅಧಿಕಾರ ಶಾಹಿ ಮುಂತಾದ ಲೋಪಗಳನ್ನು ದುರ್ಬೀನು ಹಾಕಿ ಹುಡುಕಿ ತೆಗೆದೆಸೆದು ಚೈತನ್ಯ ಭರಿತವಾಗಿ ಮುನ್ನಡೆಯಲಿದೆ. ಇದು ಕಳೆಗೆಟ್ಟು ರೋಗಪೀಡಿತವಾಗಿ, ಹತಾಶವಾಗಿ ಹಿಂಸಾತ್ಮಕ ಕ್ರೂರ ಪಶುವಾಗಿರುವ ಸಾಮ್ರಾಜ್ಯಶಾಹಿಯ ಯುದ್ಧೋನ್ಮಾದಕ್ಕೆ ಶಾಂತಿಯ, ಆರೋಗ್ಯಪೂರ್ಣ ಶಾಂತಿಯ ಸವಾಲಾಗಲಿದೆ. ಇಡೀ ಜಗತ್ತಿನ ಉಳಿವಿನ ಆಶಯದ ಕೇಂದ್ರ ಬಿಂದುವಾಗಲಿದೆ.

ಫೆಬ್ರುವರಿ 25ರಿಂದ ನಡೆದ ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ 27 ನೇ ಮಹಾಧಿವೇಶನಕ್ಕೆ ಶುಭ ಕೋರುತ್ತಾ ಹಾಗೂ ಪ್ರತಿನಿಧಿಗಳನ್ನು ಅಭಿನಂದಿಸುತ್ತಾ, ಸಿಪಿಐ [ಎಂ] ನ ಕೇಂದ್ರ ಸಮಿತಿ ಅಮೇರಿಕನ್ ಸಾಮ್ರಾಜ್ಯ ಶಾಹಿಯ ಹತಾಶೆಯಿಂದಾಗಿ ಜಗತ್ತಿಗೆ ಒಂದು ಪರಮಾಣು ಯುದ್ಧದ ಬೆದರಿಕೆಯ ವಾತಾವರಣ ಉಂಟಾಗಿರುವ ಸಂದರ್ಭದಲ್ಲಿ ನಡೆಯುತ್ತಿರುವ ಈ ಅಧಿವೇಶನದಲ್ಲಿ ಚರ್ಚಿಸಲಿರುವ ವಿಷಯಗಳು ಸೋವಿಯತ್ ಒಕ್ಕೂಟದ ಕಮ್ಯುನಿಸ್ಟರಿಗೆ ಮಾತ್ರವಲ್ಲ, ಜಗತ್ತಿನಾದ್ಯಂತ ಎಲ್ಲಾ ಕಮ್ಯುನಿಸ್ಟರಿಗೆ, ಹಾಗೂ ದುಡಿಯುವ ಜನತೆಗೆ ಮತ್ತು ಶಾಂತಿಪ್ರಿಯ ಜನಗಳಿಗೆ ಬಹಳ ಮುಖ್ಯದ್ದಾಗಿದೆಯೆಂದು ಹೇಳಿದೆ. ಪ್ರಥಮ ಸಮಾಜವಾದೀ ಕ್ರಾಂತಿಯಿಂದ ಬೆಳವಣಿಗೆ ಹೊಂದಿದ ಸಮಾಜವಾದದವರೆಗೆ ತನ್ನ ಹಾಗೂ ದುಡಿಯುವ ಜನಗಳ ಪ್ರಯತ್ನಗಳಿಂದಾಗಿ ದಾರಿಹಾಕಿಕೊಡುತ್ತಾ ಬಂದಿರುವ ಸಮಾಜವಾದಿ ವ್ಯವಸ್ಥೆಯ ಅಜೇಯತೆಯನ್ನು ಸಿ.ಪಿ.ಎಸ್. ಯು. ತೋರಿಸಿಕೊಟ್ಟಿದೆ.

ಹೊಸ ಕಾರ್ಯಕ್ರಮ

ಕಳೆದ ಏಳು ವರ್ಷಗಳ, ಅದರಲ್ಲೂ ಮುಖ್ಯವಾಗಿ 1961ರಲ್ಲಿ 3ನೇ ಕಾರ್ಯಕ್ರಮ ಅಂಗೀಕರಿಸಿದ ನಂತರ ಶ್ರೀಮಂತ ಅನುಭವಗಳನ್ನು ಹೊಸ ಕಾರ್ಯಕ್ರಮ ಒಳಗೊಳ್ಳಲಿದ್ದು, ಸದ್ಯದ ಸಮಾಜವಾದವನ್ನು ಮತ್ತಷ್ಟು ಶ್ರೇಷ್ಠಗೊಳಿಸುವ ವಿಶ್ಲೇಷಣೆ ಹಾಗೂ ಅಂತಿಮಗೊಂಡ ಈ ಹೊಸ ಕಾರ್ಯಕ್ರಮದ ನಿರೂಪಣೆಗಳು ಜಗತ್ತಿನಾದ್ಯಂತ ಕಮ್ಯುನಿಸ್ಟರಿಗೆ ಹಾಗೂ ಪ್ರಗತಿಶೀಲರಿಗೆ ಬಹಳ ಮಹತ್ವದ್ದಾಗಲಿವೆಯೆಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಸಾಮ್ರಾಜ್ಯಶಾಹಿಗಳಿಗೆ ದೊಡ್ಡ ತಡೆ

ಈ ಮಹಾಧಿವೇಶನ ಜಗತ್ತಿನ ಶಾಂತಿಯ ರಕ್ಷಣೆಯ ಬಗ್ಗೆ ಚರ್ಚಿಸಲಿದೆ. ಶಾಂತಿಯನ್ನು ನಾಶಗೊಳಿಸಲು ಉದ್ಯುಕ್ತವಾಗಿರುವ ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ತಾರಾಯುದ್ಧದ ಮೂಲಕ ಅದನ್ನು ಮತ್ತಷ್ಟು ಹೆಚ್ಚಿಸಿದೆ. ಸೋವಿಯತ್ ಒಕ್ಕೂಟವೇ ಅದರ ಆಕ್ರಮಣದ ಗುರಿ. ಈ ಅಪಾಯಕಾರಿ ಸ್ಥಿತಿಯನ್ನು ಅರಿತಿರುವ ಸೋವಿಯತ್ ಒಕ್ಕೂಟ ಈ ಉದ್ರೇಕಕಾರಿ ಸ್ಥಿತಿಯಲ್ಲೂ ಯುದ್ಧೋನ್ಮಾದಿಗಳಲ್ಲಿ ಸ್ಥಿಮಿತತೆ ತರಲು ಒಂದಾದ ಮೇಲೊಂದರಂತೆ ಶಾಂತಿ ಪ್ರಸ್ತಾಪಗಳನ್ನು ಇಟ್ಟು ಪ್ರಯತ್ನಿಸಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಸಿಪಿಐ (ಎಂ.) ನ ಕೇಂದ್ರ ಸಮಿತಿ ತನ್ನ ಶುಭಾಶಯ ಸಂದೇಶದಲ್ಲಿ ಸಿ.ಪಿ.ಎಸ್. ಯು. ಹಾಗೂ ವಾರ್ತಾ ಸಂಧಿಯ ದೇಶಗಳ ಶಾಂತಿಪ್ರಸ್ತಾಪಗಳಿಗೆ ತನ್ನ ಬೆಂಬಲವನ್ನು ಪುನರುಚ್ಚರಿಸುತ್ತಾ "ನಿಮ್ಮ ಮಹಾಧಿವೇಶನದ ವೇದಿಕೆಯಿಂದ ಯುದ್ಧೋನ್ಮಾದಿಗಳ ವಿರುದ್ಧ ಹಾಗೂ ಶಾಂತಿಗಾಗಿ ಸೋವಿಯತ್ ಸಮಾಜವಾದಿ ವ್ಯವಸ್ಥೆಯ ಶಕ್ತಿಶಾಲೀ ದನಿ ಯೆತ್ತಲಾಗುವುದು" ಎಂದು ಹೇಳಿದೆ.

ವಿಮೋಚನಾ ಹೋರಾಟಗಳಿಗೆ ಬೆಂಬಲ

ಈ ರೀತಿ ಸಾಮ್ರಾಜ್ಯಶಾಹಿ ಸೋವಿಯೆತ್ ಒಕ್ಕೂಟದ ವಿರುದ್ಧ ಯುದ್ಧ ತಯಾರಿಯೊಂದಿಗೆ ಜಾಗತಿಕ ಮಟ್ಟದಲ್ಲಿ ಯುದ್ಧದ ಯೋಜನೆ ಹೂಡುತ್ತಿರುವುದು ಮಾತ್ರವಲ್ಲ ದಕ್ಷಿಣ ಆಫ್ರಿಕಾದ ಜನಾಂಗ ದ್ವೇಷಿಗಳಿಗೆ, ಬೆಂಬಲ ನೀಡಿ, ಕ್ರಾಂತಿಕಾರಿ ನಿಕಾರಾಗುವಕ್ಕೆ ಬೆದರಿಕೆ ಹಾಕಿ, ಅಂಗೋಲವನ್ನು ಅಸ್ಥಿರಗೊಳಿಸಲು ಸಂಚು ಹೂಡಿ ಪ್ಯಾಲೆಸ್ತೀನಿಯ ಹೋರಾಟ ಹಾಗೂ ಅರಬ್ ಪ್ರಗತಿಪರ ಶಕ್ತಿಗಳ ವಿರುದ್ಧ ಇಸ್ರೇಲನ್ನು ಬಳಸಿಕೊಂಡು ನವ ವಿಮೋಚಿತ ದೇಶಗಳ ಸ್ವಾತಂತ್ರ್ಯವನ್ನು ಬುಡಮೇಲು ಮಾಡುತ್ತಿದೆ ಹಾಗೂ ವಿಮೋಚನಾ ಸಮರಗಳನ್ನು ದಮನಗೊಳಿಸುತ್ತಿದೆ. ಇಂತಹ ಸ್ವತಂತ್ರ ದೇಶಗಳಿಗೆ ಹಾಗೂ ವಿಮೋಚನಾ ಸಮರಗಳಿಗೆ ಸೋವಿಯತ್ ಒಕ್ಕೂಟದ ದೃಢ ಬೆಂಬಲ ಹಾಗೂ ಸೌಹಾರ್ದ ಒಂದು ಪ್ರಮುಖ ಅಂಗವಾಗಿದೆಯಾದ್ದರಿಂದ ಈ ಮಹಾ ಅಧಿವೇಶನದ ಕಾರ್ಯಕ್ರಮಗಳು ದೇಶಗಳ ಸ್ವಾಧೀನತೆಯ ರಕ್ಷಣೆಯ ವಿಷಯದಲ್ಲಿ ಬಹಳ ಮಹತ್ವ ಹೊಂದಿವೆಯೆಂದು ಕೇಂದ್ರ ಸಮಿತಿ ಹೇಳಿದೆ.

ಭಾರತ – ಸೋವಿಯತ್ ಮೈತ್ರಿ

ಸ್ವಾತಂತ್ರ್ಯನಂತರದ ಕಳೆದ ಮೂರು ದಶಕಗಳಲ್ಲಿ ನಮ್ಮ ಎರಡು ದೇಶಗಳ ನಡುವೆ ಬೆಸೆದಿರುವ ಸ್ನೇಹ – ಸಹಕಾರದ ಒಪ್ಪಂದದ ಮೂಲಕ ಸಾಕಾರಗೊಂಡಿರುವ ದೀರ್ಘಕಾಲ ಗೆಳೆತನ ಮತ್ತು ಸಹಕಾರ ಹಾಗೂ ಆರ್ಥಿಕ ಒಪ್ಪಂದಗಳು ಸಾಮ್ರಾಜ್ಯ ಶಾಯಿ ದೇಶಗಳ ಒತ್ತಡವನ್ನು ಎದುರಿಸಿ, ನಮ್ಮ ದೇಶದ ಸಾರ್ವಭೌಮತೆಯನ್ನು ರಕ್ಷಿಸಲು ನೆರವಾಗಿದ್ದು, ಈ ಉಪಖಂಡದಲ್ಲಿ ಅಮೆರಿಕಾ ಸಾಮ್ರಾಜ್ಯಶಾಹಿ ನಮ್ಮ ದೇಶದ ಸುತ್ತಲೂ ದ್ವೇಷಕಾರುವ ಆಡಳಿತಗಳನ್ನು ನೆಟ್ಟು ಅಸ್ಥಿರತೆ ಉಂಟುಮಾಡುತ್ತಿರುವ ಗಂಭೀರ ಪರಿಸ್ಥಿತಿಯಲ್ಲಿ ನಮ್ಮೆರಡು ದೇಶಗಳ ಸ್ನೇಹ ಸಹಕಾರ ಸ್ಥಿರತೆಯನ್ನು ಕಾಯ್ದುಕೊಳ್ಳುವ ಒಂದು ಅಂಶವೆಂದು ಕೇಂದ್ರ ಸಮಿತಿಯ ಸಂದೇಶ ತಿಳಿಸಿದೆ.

ಅಲಿಪ್ತ ಆಂದೋಲನಕ್ಕೆ ಸೋವಿಯತ್ ಒಕ್ಕೂಟದ ಬೆಂಬಲ ಹಾಗೂ ನೆರವನ್ನು ಸಂದೇಶ ಸ್ಮರಿಸಿಕೊಂಡಿದೆ. ಭಾರತೀಯ ಸಮಾಜದೊಳಗೆ ಒಂದು ಮೂಲಭೂತ ಸಾಮಾಜಿಕ ಪರಿವರ್ತನೆಗೆ ಹೋರಾಟ ನಡೆಸುತ್ತಾ ಪರಮಾಣು ಯುದ್ಧದ ವಿರುದ್ಧವೂ ಭಾರತೀಯ ಜನತೆಯನ್ನು ಅಣಿನೆರಸಿರುವುದು. ಹಾಗೂ ಶಾಂತಿಗಾಗಿ ಒಂದು ಆಂದೋಲನ ಬೆಳೆಸುವಲ್ಲಿ ಎಲ್ಲಾ ಪ್ರಗತಿಪರ, ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ಸೇರಿಕೊಳ್ಳುವುದು ತನ್ನ ಅಂತರಾಷ್ಟ್ರೀಯ ಕರ್ತವ್ಯದ ಒಂದು ಅವಿಭಾಜ್ಯ ಅಂಗವೆಂದು ಭಾವಿಸುವುದಾಗಿ ಸಿ. ಪಿ. ಐ (ಎಂ) ನ ಕೇಂದ್ರ ಸಮಿತಿ ಸ್ಪಷ್ಟಪಡಿಸಿದೆ.

ಸಾಮ್ರಾಜ್ಯ ಶಾಹಿಯ ಜಾಗತಿಕ ಬೆದರಿಕೆಯ ಎದುರು ಅಂತರಾಷ್ಟ್ರೀಯ ಕಮ್ಯೂನಿಸ್ಟ್ ಆಂದೋಲನದಲ್ಲಿ ಹೆಚ್ಚಿನ ಸಮನ್ವಯತೆಯ ಬಗ್ಗೆ ಸಿ. ಪಿ. ಐ. (ಎಂ) ಹೆಚ್ಚಿನ ಒತ್ತು ನೀಡುತ್ತಿದ್ದು ಒಂದು ತತ್ವಬದ್ಧ ಐಕ್ಯತೆಗಾಗಿ ಪ್ರಯತ್ನಿಸುವುದು ತನ್ನ ಕರ್ತವ್ಯವೆಂದು ಬಗೆಯುವುದಾಗಿ ಹೇಳುತ್ತಾ ಸಮಾಜವಾದ ಹಾಗೂ ಜಾಗತಿಕ ಶಾಂತಿ ಹಾಗೂ ಉದ್ದೇಶಕ್ಕೆ ನಿಮ್ಮ ಪ್ರಯತ್ನಗಳು ಮಹತ್ವದ ಫಲಿತಾಂಶಕ್ಕೆ ದಾರಿಮಾಡಿ ಕೊಡುವುವೆಂಬ ದೃಢ ನಂಬಿಕೆ ನಮಗಿದೆ" ಎಂದು ತನ್ನ ಶುಭಾಶಯ ಸಂದೇಶದಲ್ಲಿ ತಿಳಿಸಿದೆ.

ಕ್ಯೂಬಾ ಕಮ್ಯುನಿಸ್ಟ್ ಪಕ್ಷ ಮಹಾಧಿವೇಶನದಲ್ಲಿ....

ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ ಹೊಸ ಉತ್ಕ್ರಾಂತಿ

ಅಮೇರಿಕಾ ಭೂಖಂಡದ, ಜಗತ್ತಿನ ಪೂರ್ವಾರ್ಧಗೋಲದ ಮೊದಲ ಸಮಾಜವಾದಿ ದೇಶ, ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನದಲ್ಲಿ ಲ್ಯಾಟಿನ್ ಅಮೇರಿಕಾ ದೇಶಗಳ ಕ್ರಾಂತಿಕಾರಿ ಚಳುವಳಿಗಳ ಬೆಳವಣಿಗೆಯ ವಿಸ್ತಾರ ಅನುಭವವಾಗುವುದು ಸಹಜ. ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿನ ಕ್ರಾಂತಿಕಾರಿ ಚಟುವಟಿಕೆಯ ಹೊಸ ಅಲೆಯ ಪ್ರತಿಬಿಂಬ ಮೂಡಿತ್ತು ಈ ಕ್ರಾಂತಿಕಾರಿ ಚಳವಳಿಗಳ ನಾಯಕರ ಮಾತಿನಲ್ಲಿ. "ತಮ್ಮ ವಿಮೋಚನೆಗಾಗಿ ಹೋರಾಡುವ ಯಾರಿಗೇ ಆಗಲಿ, ತಮ್ಮ ರಕ್ತ ಚೆಲ್ಲುವ, ಅವರೊಂದಿಗೆ ತಮ್ಮ ಅನ್ನವನ್ನು ಹಂಚಿಕೊಳ್ಳುವ, ನಿಕರಾಗುವದ ಅಧ್ಯಕ್ಷ ಡೇನಿಯಲ್ ಒರ್ಟೆಗಾರವರ ಮಾತು, ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ಸ್ವರೂಪದ ಸಾಕಾರ ರೂಪವಾದ ಕ್ಯೂಬಾ ಕ್ರಾಂತಿಕಾರಿಗಳ ಅಧಿವೇಶನದಲ್ಲಿ ಲ್ಯಾಟಿನ್ ಅಮೇರಿಕನ್ ದೇಶಗಳ ಪರವಾಗಿ ಮಾತನಾಡಿದ ಎಲ್ಲ ನಾಯಕರೂ, ನಿಕರಾಗುವದಲ್ಲಿ ಅಮೇರಿಕನ್, ಸಾಮ್ರಾಜ್ಯ ಶಾಹಿಗಳು ಮಧ್ಯ ಪ್ರವೇಶ ಮಾಡಿದ್ದೇ ಆದರೆ ಅದು ಕೇವಲ ನಿಕರಾಗುವಾ ಹಾಗೂ ಅಮೇರಿಕನ್ ಸಾಮ್ರಾಜ್ಯ ಶಾಹಿ ಹಾಗೂ ಅವರ ಕೈಗೊಂಬೆಗಳ ನಡುವಿನ ಹೋರಾಟವಾಗಿ ಉಳಿಯುವುದಿಲ್ಲ. ಅದು ಎಲ್ಲಾ ಲ್ಯಾಟಿನ್ ಅಮೇರಿಕಾ ದೇಶಗಳ ಜನತೆ ಹಾಗು ಅಮೇರಿಕನ್ ಸಾಮ್ರಾಜ್ಯಶಾಹಿಗಳ ನಡುವಿನ ಹೋರಾಟವಾಗಿ ಪರಿಣಮಿಸುತ್ತದೆ ಎಂದು ಸ್ಪಷ್ಟಪಡಿಸಿದರು.

20 ವರ್ಷಗಳಿಂದ ಗ್ವಾಟೆಮಾಲಾದ ಕಾಡುಗಳಿಂದ ಸಶಸ್ತ್ರ ಹೋರಾಟ ನಡೆಸುತ್ತಿರುವ ಗ್ವಾಟೆಮಾಲಾ ಏಕೀಕೃತ ಪಕ್ಷದ ರಾಜಕೀಯ ಆಯೋಗದ ಸದಸ್ಯ ಒಟ್ಟೋ ಸಾಂಚೆಜ್ ತಮ್ಮ ಸಂಗಾತಿಗಳೊಂದಿಗೆ ನೇರವಾಗಿ ಕಾಡುಗಳಿಂದಲೇ ಅಧಿವೇಶನಕ್ಕೆ ಬಂದು ಗ್ವಾಟೆಮಾಲಾದ ಜನತೆಯ ಅಂತಿಮ ವಿಜಯದ ಬಗ್ಗೆ ಪೂರ್ಣ ಭರವಸೆ ವ್ಯಕ್ತಪಡಿಸಿದರು. ಹೈತಿಯಿಂದ ಬಂದ ಹೈತಿ ಏಕೀಕೃತ ಪಕ್ಷದ ಪ್ರಧಾನ ಕಾರ್ಯದರ್ಶಿ ರೆನೆ ಥಿಯೋಡೋರ್ ರವರ ನುಡಿಗಳಂತೂ ಭವಿಷ್ಯವಾಣಿಯೇ ಆಗಿತ್ತು. ಅಲ್ಲಿನ ಸರ್ವಾಧಿಕಾರಿ ಡುವೇಲಿಯರ್‌ನ ಅಂತಿಮ ದಿನಗಳು ಸಮೀಪಿಸುತ್ತಿವೆ, ಅಸಂತುಷ್ಟ ಕಾಡುಗಳಲ್ಲಿ 'ಕಾಡುಕಿ ಬಿಡುಲಿಕುವ' ಯೋಚನೆಯಲ್ಲಿದೆ ಎಂದಿದ್ದರವರು. ಮಾರು ದಿನವೇ ಡುವೆಲಿಯರ್ ಅಮೆರಿಕಾದ ವಿಮಾನ ಪಡೆದು ವಿಮಾನದಲ್ಲಿ ಫ್ರಾನ್ಸ್‌ಗೆ ಪಲಾಯನ ಮಾಡಿದ ಸುದ್ದಿ ಬಂದಿತು.

ಪೆರುವಿನ ಅಮೇರಿಕನ್ ಸಾಮ್ರಾಜ್ಯಶಾಹಿ ಪರ ಪ್ರತಿಗಾಮಿ ಆಳ್ವಿಕೆಯನ್ನು ಕೊನೆಗೊಳಿಸಲು ಸಂಯೋಜಿತ ಹೋರಾಟ ನಡೆಸುತ್ತಿರುವ ಎಂಟು ಪ್ರತಿನಿಧಿ ಮಂಡಲಿಗಳು, ಕೊಲಂಬಿಯಾದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಸಶಸ್ತ್ರ ಹೋರಾಟ ನಡೆಸುತ್ತಿರುವ ಹಾಗೂ ಕ್ಯೂಬಾ ಕ್ರಾಂತಿಯಿಂದ ಪ್ರೇರಿತ ನಾಲ್ಕು ಆಯೋಗಗಳು ಹಾಜರಿದ್ದವು. ಚಿಲಿಯ ಆರು ಪ್ರತಿನಿಧಿ ಮಂಡಲಿಗಳ ಪರವಾಗಿ ಮಾತನಾಡಿದ ಚಿಲಿ ಕಮ್ಯುನಿಸ್ಟ್ ಪಕ್ಷದ ರಾಜಕೀಯ ಆಯೋಗದ ಸದಸ್ಯ ವೊಲೋದಿಯಾ ಟೈಟಿಲ್‌ಬ್ಯೋಮ್ 1986 ನೇ ವರ್ಷ ಪಿನೋಚೆಟ್ ಸರ್ವಾಧಿಕಾರದಿಂದ ಚಿಲೀ ಜನತೆಯ ವಿಮೋಚನೆಯ ವರ್ಷವಾಗಲಿದೆಯೆಂದರು.

ಎಲ್ ಸಾಲ್ವಡೋರಿನ ಜನತೆ ಸ್ವಾತಂತ್ರ್ಯ ಗಳಿಸುವ ದಿನ ಬಹಳ ದೂರವಿಲ್ಲವೆಂದು ಅಲ್ಲಿನ ಮಾರ್ಟೀ ರಾಷ್ಟ್ರೀಯ ವಿಮೋಚನಾ ರಂಗ (MNLF) ದ ಕಮಾಂಡರ್ ಫೆರ್ಮಿನ್ ಸಿಯೆನ್ ಪ್ಯೂಗೋಸ್ ಘೋಷಿಸಿದರೆ ಅರ್ಜೆಂಟಿನಾ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಅಥೋಸ್ ಪಾವಾ ಲ್ಯಾಟಿನ್ ಅಮೇರಿಕಾದಲ್ಲಿ ನವ ವಸಾಹತುಶಾಹಿ ಹಾಗೂ ಸಾಮ್ರಾಜ್ಯ ಶಾಹಿಯ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಆಂದೋಲನಗಳಿಗೆ ಕ್ಯೂಬಾ ಕ್ರಾಂತಿ ನೀಡುತ್ತಾ ಬಂದಿರುವ ಪ್ರೇರಣೆಗಳನ್ನು ವಿವರಿಸಿ ಹೇಳಿದರು.

ಲ್ಯಾಟಿನ್ ಅಮೇರಿಕಾದಲ್ಲಿ ಒಂದು ಹೊಸ ಉತ್ಕ್ರಾಂತಿ ಎದ್ದಿರುವುದರ ಸಂಕೇತವಾಗಿತ್ತು ಕ್ಯೂಬಾದ ಪಕ್ಷದ ಅಧಿವೇಶನದ ವೇದಿಕೆ. ಫೀಡೆಲ್ ಕಾಸ್ಟ್ರೋ ಲ್ಯಾಟಿನ್ ಅಮೇರಿಕಾ ದೇಶಗಳ ಸಂಪನ್ಮೂಲಗಳನ್ನು ಕ್ಷಯಿಸುತ್ತಿರುವ ಭಾರಿ ಸಾಲದ ಪ್ರಶ್ನೆಯನ್ನು ಎತ್ತಿಕೊಂಡರು.

ಲ್ಯಾಟಿನ್ ಅಮೇರಿಕಾದ ಕ್ರಾಂತಿಕಾರಿಗಳಲ್ಲದೆ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್, ಸ್ವಾಪೋ, ಜಿಂಬಾಬ್ವೆ, ಅಂಗೋಲಾ, ಅಲ್ಜೀರಿಯಾ, ಪೋಲಿಸಾರಿಯೋ ರಂಗ, ಇಥಿಯೋಪಿಯಾ ಮುಂತಾದ ದೇಶಗಳ ವಿಮೋಚನಾ ರಂಗಗಳ ಪ್ರತಿನಿಧಿಗಳು ಕೂಡಾ ಈ ಅಧಿವೇಶನದಲ್ಲಿ ಭಾಗವಹಿಸಿ ಕ್ಯೂಬಾದ ಕ್ರಾಂತಿಕಾರಿಗಳು ತೋರಿಸಿರುವ ಕಾರ್ಮಿಕ ವರ್ಗದ ಅಂತರ ರಾಷ್ಟ್ರೀಯತೆಯ ಚೈತನ್ಯವನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

G. No. BGW-143 MAG [2] PRB DECR 319/78-79 [redacted]

ಸಿ. ಪಿ. ಐ. [ಎಂ] ಪೊಲಿಟ್‌ಬ್ಯೂರೋ ಹೇಳಿಕೆ

ಬೆಲೆ ಏರಿಕೆ, ಛಿದ್ರಕಾರಿ ಶಕ್ತಿಗಳ ವಿರುದ್ಧ ದೃಢ ಹೋರಾಟಕ್ಕೆ ಕರೆ

ಸಿ. ಪಿ. ಐ. (ಎಂ) ನ ಪೊಲಿಟ್ ಬ್ಯೂರೋ ಫೆಬ್ರವರಿ 18 ಹಾಗೂ 19 ರಂದು ನವ ದೆಹಲಿಯಲ್ಲಿ ಸಭೆ ಸೇರಿ ಪಕ್ಷದ ಹನ್ನೆರಡನೇ ಮಹಾಧಿವೇಶನದ ನಂತರದ ಪ್ರಮುಖ ಬೆಳವಣಿಗೆಗಳನ್ನು ವಿಮರ್ಶಿಸಿತು. ಜೀವನಾವಶ್ಯಕ ಸಾಮಗ್ರಿಗಳ ಬೆಲೆಯಲ್ಲಿ ಕೇಂದ್ರ ಸರಕಾರ ಇತ್ತೀಚೆಗೆ ಮಾಡಿದ ಹೆಚ್ಚಳದ ವಿರುದ್ಧ ದೇಶಾದ್ಯಂತ [illegible] ಸ್ಫೂರ್ತಿಯಿಂದ ಪ್ರತಿಭಟಿಸಿದ [illegible]ವನ್ನು ಅಭಿನಂದಿಸಿದೆ. [illegible]ಲ್ಲೂ ಇದರ ಪ್ರತಿಫಲನ [illegible] ಬಗ್ಗೆ ಪಾಲಿಟ್ ಬ್ಯೂರೋ ತನ್ನ ಸಂತಸ ವ್ಯಕ್ತ ಪಡಿಸಿದೆ. ವಿಶ್ವ ಬ್ಯಾಂಕ್ ಹಾಗೂ ಐ. ಎಂ. ಎಫ್ ನ "ಸಲಹೆ"ಯ ಪ್ರಕಾರ ಇನ್ನು ಮುಂದೆಯೂ ಕೇಂದ್ರ ಸರಕಾರ ಮುಂದುವರಿಸಲಿರುವ ಇಂತಹ ಧೋರಣೆಗಳ ವಿರುದ್ಧ ದುಡಿಯುವ ಜನತೆಯು ಹೋರಾಟಶೀಲ ಸಂಘಟನೆಗಳು, ಹೋರಾಟ ನಿರತ ಜನತೆಯನ್ನು ಬೆಂಬಲಿಸುವ ಎಲ್ಲಾ ರಾಜಕೀಯ ಪಕ್ಷಗಳು ಇತ್ತೀಚಿನ ಬಂದ್‌ಗಳಲ್ಲಿ ತೋರ್ಪಡಿಸಿದ ಐಕ್ಯತೆಯನ್ನು ಮತ್ತಷ್ಟು ಬಲಪಡಿಸುವುದು ಅಗತ್ಯ ಎಂದು ಪಾಲಿಟ್ ಬ್ಯೂರೋದ ಹೇಳಿಕೆ ನುಡಿದಿದೆ.

ಶ್ರೀರಾಮ ಜನ್ಮಭೂಮಿ ?

ಜನ ಜೀವನದ ಈ ವಾಸ್ತವ ಸಮಸ್ಯೆಗಳಿಂದ ಜನತೆಯ ಗಮನ ಬೇರೆಡೆಗೆ ತಿರುಗಿಸಿ ಜನಗಳೇ ಪರಸ್ಪರ ಹೊಡೆದಾಡುವಂತೆ ಮಾಡಲು ಆಳುವ ವರ್ಗಗಳು ಯತ್ನಿಸುತ್ತಿವೆ ಎಂದ ಪಾಲಿಟ್ ಬ್ಯೂರೋ ಈ ಸಂದರ್ಭದಲ್ಲಿ ಅಯೋಧ್ಯೆಯ ಒಂದು ಪೂಜಾ ಸ್ಥಳದ ಬಗ್ಗೆ ನ್ಯಾಯಾಲಯದ ತೀರ್ಪಿನಿಂದ ಉಂಟಾಗಿರುವ ಸ್ಫೋಟಕ ಸ್ಥಿತಿಯನ್ನು ಉಲ್ಲೇಖಿಸಿ ಹಿಂದೂ ಹಾಗೂ ಮುಸ್ಲಿಂ ಕೋಮುವಾದೀ ಸಂಘಟನೆಗಳು ಇದನ್ನ ಭಾವೋದ್ರೇಕ ಹರಡಲು ಬಳಸುತ್ತಿವೆಯೆಂದು ಹೇಳಿದೆ. ಇದರಲ್ಲಿ ಕಾಂಗ್ರೆಸ್ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಿಲ್ಲವಾದರೂ ಕೆಲವು ವಿರೋಧ ಪಕ್ಷಗಳ ಮುಖಂಡರೂ ಕೂಡಾ ಕೋಮು ಸೌಹಾರ್ದ ಕಾಯುವ ಬದಲು ತದ್ವಿರುದ್ಧವಾಗಿ ವರ್ತಿಸುತ್ತಿದ್ದಾರೆ. ಎಂಬುದನ್ನು ಗಮನಿಸಿದ ಪಾಲಿಟ್ ಬ್ಯೂರೋ ಇಂತಹ ದುಷ್ಟ ಪ್ರಯತ್ನಗಳು ಯಾವ ದಿಕ್ಕಿನಿಂದಲೇ ಬರಲಿ, ಅವುಗಳ ವಿರುದ್ಧ ದೃಢ ಹೋರಾಟ ನಡೆಸಬೇಕೆಂದು ಕರೆ ನೀಡಿದೆ.

ಅಕಾಲಿ ಪಕ್ಷ ಹಾಗೂ ಪಂಜಾಬ್ ಸರಕಾರ ಭಯೋತ್ಪಾದಕರೊಂದಿಗೆ ಕಟ್ಟುನಿಟ್ಟಾಗಿ ವರ್ತಿಸಿಲ್ಲವೆಂಬುದನ್ನು ಗಮನಿಸಿದ ಪಾಲಿಟ್ ಬ್ಯೂರೋ ಭಯೋತ್ಪಾದಕರನ್ನು ಖುಶಿಗೊಳಿಸುವುದನ್ನು ನಿಲ್ಲಿಸಬೇಕೆಂದು ಅವರಿಗೆ ಕರೆ ನೀಡಿದೆ. ಜತೆಗೆ ರಾಜಿ ಮನೋಭಾವದ ಕೆಲವರನ್ನು ಅಕಾಲಿ ಪಕ್ಷದಿಂದ ಹೊರದಬ್ಬುವಂತೆ ಮಾಡಿರುವ ಜನತೆಯ ಒತ್ತಡದ ಬಗ್ಗೆ ಅದು ಮೆಚ್ಚುಗೆ ವ್ಯಕ್ತಪಡಿಸಿದೆ. ಈಗಲಾದರೂ ಅಕಾಲಿ ಪಕ್ಷ ಮತ್ತು ಸರ್ಕಾರ ದೃಢ ಕ್ರಮ ಕೈಗೊಳ್ಳಬೇಕೆಂದು ಅದು ಒತ್ತಾಯಿಸಿದೆ.

ಮತಾಂಧತೆಗೆ ಕಾಂಗ್ರೆಸ್ ಬೆಂಬಲ

ಕೇರಳದ ಕಾಂಗ್ರೆಸ್ ನೇತೃತ್ವದ ಯು ಡಿ ಎಫ್ ಮುಂದುವರಿದಿರುವುದು ಹಾಗೂ ಜಾತಿ, ಕೋಮು ಕೂಲಿಗಳಿಂದ ಅಧಿಕಾರದಲ್ಲಿ ಮುಂದುವರಿಸಬಯಸುವ ಕಾಂಗ್ರೆಸ್‌ನ ಧೋರಣೆಯು ದಿವಾಳಿಕೋರತನ ಕಳೆದ ಕೆಲವು ವಾರಗಳಲ್ಲಿ ಕಾಂಗ್ರೆಸ್ ಪಕ್ಷದ ಸಮಯಸಾಧಕತನವನ್ನು ಪೂರ್ಣವಾಗಿ ಬಯಲಿಗೆಳೆದಿದೆಯೆಂದು ಪಾಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಅತ್ಯುಚ್ಚ ನ್ಯಾಯಾಲಯ ಶಾಬಾನೂ ಮೊಕದ್ದಮೆಯಲ್ಲಿ ಮುಸ್ಲಿಂ ಮಹಿಳೆಯರಿಗೆ ನೀಡಿದ ಹಕ್ಕನ್ನು ಕಸಿದುಕೊಳ್ಳುವ, ಒಂದು ಮಸೂದೆಯ ಮೂಲಕ ಮುಸ್ಲಿಂ ಮೂಲಭೂತವಾದಿಗಳನ್ನು ತುಷ್ಟಿಗೊಳಿಸಬಯಸುವ ರಾಜೀವ್‌ಗಾಂಧಿ ಸರಕಾರದ ಪ್ರಯತ್ನವನ್ನು ಪಾಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ. ಎಲ್ಲಾ ಕೋಮುಗಳ ಪ್ರಗತಿಪರ ಶಕ್ತಿಗಳಿಗೆ ದೊಡ್ಡ ಅಘಾತ ನೀಡುವ ಈ ಪ್ರಯತ್ನ ಮುಸ್ಲಿಂ ಕೋಮಿನಲ್ಲಿ ಮತಾಂಧತೆಯನ್ನು ಖಂಡಿತವಾಗಿಯೂ ಬಲಪಡಿಸಿ ಅವರನ್ನು ಇತರ ಜನಸಾಮಾನ್ಯರಿಂದ ದೂರಗೊಳಿಸಿ ಕೋಮುವಾದಿಗಳಿಗೆ ಅವರ ಮೇಲೆ ಆಕ್ರಮಣ ನಡೆಸಲು ಸುಲಭ ಮಾಡಿ ಕೊಟ್ಟಂತಾಗುತ್ತದೆ. ಆದ್ದರಿಂದ ಈ ಪ್ರಯತ್ನದ ವಿರುದ್ಧ ಎಲ್ಲಾ ಪ್ರಗತಿಶೀಲ ಪಕ್ಷಗಳು, ಸಂಘಟನೆಗಳು ಹಾಗೂ ಎಲ್ಲಾ ಕೋಮುಗಳ ವ್ಯಕ್ತಿಗಳು ತಮ್ಮ ದನಿಯೆತ್ತಬೇಕೆಂದು ಪಾಲಿಟ್‌ಬ್ಯೂರೋ ಕರೆ ನೀಡಿದೆ.

ಅಸ್ಸಾಂ

ಅಸ್ಸಾಂನಲ್ಲಿ ಎ. ಜಿ. ಪಿ. ಸರಕಾರ ಅಧಿಕಾರ ವಹಿಸಿಕೊಂಡಾಗಿನಿಂದ ಸಿ. ಪಿ. ಐ (ಎಂ) ಹಾಗು ಇತರ ವಿರೋಧ ಪಕ್ಷಗಳ ಕಾರ್ಯಕರ್ತರಿಗೆ ಗೂಂಡಾ ಆಕ್ರಮಗಳಿಂದ ರಕ್ಷಣೆ ನೀಡುವಲ್ಲಿ ಎ. ಜಿ. ಪಿ. ಸರಕಾರ ವಿಫಲಗೊಂಡಿರುವುದರ ಬಗ್ಗೆ ಪಾಲಿಟ್‌ಬ್ಯೂರೋ ತನ್ನ ಆತಂಕ ವ್ಯಕ್ತಪಡಿಸಿದೆ. ತ್ರಿಪುರದಲ್ಲಿ ಕಾಂಗ್ರೆಸ್ ಟಿ. ಯು. ಜೆ. ಎಸ್. ನೊಡನೆ ಮೈತ್ರಿ ಹೊಂದಿದ್ದು ಟಿ. ಎನ್. ವಿ. ಭಯೋತ್ಪಾದಕರು ಜನತೆಯ ಮೇಲೆ ಆಕ್ರಮಣ ನಡೆಸುತ್ತಿದ್ದರೆಂದು, ಟಿ ಯು. ಜೆ. ಎಸ್ — ಕಾಂಗ್ರೆಸ್ ಕೂಟದಿಂದ ಅವರಿಗೆ ಪೂರ್ಣ ಬೆಂಬಲ ದೊರೆಯುತ್ತಿದೆಯೆಂಬುದನ್ನು ಕೂಡಾ ಪಾಲಿಟ್ ಬ್ಯೂರೋ ಗಮನಿಸಿತು.

ಬಂಧಿತ ರಾಮ್ ಸ್ವರೂಪ್ ಬಹಿರಂಗ ಪಡಿಸಿದ ಅಂಶಗಳಿಂದ ಸಾಮ್ರಾಜ್ಯಶಾಹಿ ಏಜೆಂಸಿಗಳು ದೇಶದ ಆಡಳಿತವನ್ನು ವ್ಯಾಪಕವಾಗಿ ಅವರಿಸಿಕೊಂಡಿದ್ದರೆಂಬ ಭಯ ನಿಜವಾಗಿದೆ. ಇದು ಮೂರು ದಶಕಗಳಿಂದಲೇ ನಡೆಯುತ್ತಾ ಬಂದಿದೆ ಎಂದು ಪಾಲಿಟ್ ಬ್ಯೂರೋ ಭಾರತದ ಭದ್ರತೆ ಕಾಪಾಡಲು ಪ್ರಾಥಮಿಕ ಜವಾಬ್ದಾರಿಯಲ್ಲೂ ಸರಕಾರ ವಿಫಲಗೊಂಡಿದೆ ಎಂದು ಅಭಿಪ್ರಾಯ ಪಟ್ಟಿದೆ.

ಮೇ ಶತಮಾನೋತ್ಸವ

ಸಿ.ಪಿ.ಐ [ಎಂ] ಹಾಗೂ ಸಿ.ಪಿ.ಐ. ಎಲ್ಲಾ ಸಮಾನ ವಿಚಾರದ ಪಕ್ಷಗಳನ್ನು ಹಾಗೂ ಸಂಘಟನೆಗಳನ್ನು ಮೇದಿನ ಶತಮಾನೋತ್ಸವವನ್ನು ದೇಶಾದ್ಯಂತ ಆಚರಿಸುವಲ್ಲಿ ಒಂದಾಗಿಸಲು ಮುಂದಾಗುತ್ತಿರುವುದರ ಬಗ್ಗೆ ಪೊಲಿಟ್‌ಬ್ಯೂರೋ ಹೇಳಿಕೆ ತೃಪ್ತಿ ವ್ಯಕ್ತಪಡಿಸಿದೆ. ಅಸಂಸ್ಥಾ ನೇತೃತ್ವದ ಸಾಮ್ರಾಜ್ಯಶಾಹಿ ಮಾಡುತ್ತಿರುವ ಪರಮಾಣು, ರಾಸಾಯನಿಕ ಹಾಗೂ ಬಾಹ್ಯಾಕಾಶ ಯುದ್ಧಗಳ ಹಂಚಿಕೆಯ ವಿರುದ್ಧ ಜಗತ್ತಿನಾದ್ಯಂತ ಹೋರಾಟಗಳು ಬೆಳೆಯುತ್ತಿರುವ ಹಿನ್ನಲೆಯಲ್ಲಿ ಈ ಶತಮಾನೋತ್ಸವ ನಡೆಯುತ್ತಿದೆಯೆಂದ ಪೊಲಿಟ್‌ಬ್ಯೂರೋ ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಬೇರೆಲ್ಲಾ ಪಕ್ಷಗಳು ಹಾಗೂ ಸಂಘಟನೆಗಳೊಂದಿಗೆ ಸಹಕರಿಸಲು ಪಕ್ಷದ ಎಲ್ಲಾ ಸದಸ್ಯರು ಹಾಗೂ ಘಟಕಗಳನ್ನು ವಿನಂತಿಸಿಕೊಂಡಿದೆ.

ಅಸಂಘಟಿತ ಕಾರ್ಮಿಕರ ಅಪೂರ್ವ ಪ್ರದರ್ಶನ

[1ನೇ ಪುಟದಿಂದ]

ಕೊಳ್ಳುವುದು ಉತ್ತಮ ಎಂದು ಮಂತ್ರಿಗಳಿಗೆ ಸಲಹೆ ನೀಡಿದರು.

ಮನವಿಗೆ ಉತ್ತರ ನೀಡುತ್ತಾ, ಕಾರ್ಮಿಕ ಮಂತ್ರಿಗಳು "ಸಿ ಐ ಟಿ ಯು ರಾಜ್ಯದ ಲಕ್ಷಾಂತರ ಬಡ ಕಾರ್ಮಿಕರ ಕನಿಷ್ಠ ಕೂಲಿ ವಿಷಯದಲ್ಲಿ ಸತತವಾಗಿ ಹೋರಾಡುವುದು ಸ್ವಾಗತಾರ್ಹವೆಂದು ಸಿ ಐ ಟಿ ಯುವಿನ ಪಾತ್ರವನ್ನು ಕೊಂಡಾಡಿದರು. ಖಂಡಿತವಾಗಿಯೂ ಕನಿಷ್ಠ ಕೂಲಿ ವಿಷಯದಲ್ಲಿ ಅಲ್ಪ ಕಾಲದಲ್ಲಿಯೇ ಕಾರ್ಮಿಕರಿಗೆ ನ್ಯಾಯ ಸಿಗುವಂತೆ ಕ್ರಮವಹಿಸುತ್ತೇನೆ ಎಂದು ಭರವಸೆ ಇತ್ತರು. ಹೈಕೋರ್ಟ್ ಉಂಟು ಮಾಡಿದ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಬಿಡುಗಡೆಗೊಳಿಸುವ ಕೆಲಸವನ್ನು ಅತ್ಯಂತ ತ್ವರಿತವಾಗಿ ಮಾಡುತ್ತೇನೆ ಎಂದು ಹೇಳಿದರು.

ಆಮೇಲೆ ಮಾತಾಡಿದ ಕಾಂ. ಪಿ. ರಾಮಚಂದ್ರರಾಯರು "ನಾವು ಪೋಲೀಸರು ವಿಧಿಸಿದ ಕಾನೂನು ನಿಭಂಧನೆಗಳನ್ನು ಮುರಿಯಲು ಸಿದ್ಧ. ಸರಕಾರವು ತ್ವರಿತವಾಗಿ ಈ ವಿಷಯದಲ್ಲಿ ಒಂದು ತೀರ್ಮಾನಕ್ಕೆ ಒಂದು ಕಾರ್ಮಿಕರನ್ನು ತೃಪ್ತಿಪಡಿಸದಿದ್ದರೆ ರಾಜ್ಯದಾದ್ಯಂತ ಚಳುವಳಿ ಹೋರಾಟ ಮಾಡಬೇಕಾಗಿ ಬರಬಹುದು" ಎಂದು ಸ್ಪಷ್ಟಪಡಿಸಿದರು.

ಕಾ. ಭೀಮಸಿಯವರು ಕೃಷಿ ಕೂಲಿಗಾರರ ಸ್ಥಿತಿಗತಿಯನ್ನು ವಿವರಿಸಿದರು. ಕಾಂ. ಸೂರ್ಯನಾರಾಯಣರಾವ್ ರವರು ಸಭಾಂತ್ಯದಲ್ಲಿ ಮಾತನಾಡುತ್ತಾ, "ನ್ಯಾಯದ ರೀತಿಯಲ್ಲಿ ಇನ್ನು 1 ತಿಂಗಳ ಒಳಗೆ ಈ ಪ್ರಶ್ನೆಯನ್ನು ಇತ್ಯರ್ಥ ಮಾಡದಿದ್ದಲ್ಲಿ, 1ಲಕ್ಷಕ್ಕೂ ಅಧಿಕ ಕಾರ್ಮಿಕರು ಜೈಲ್ ಭರೋ ಕಾರ್ಯಕ್ರಮಕ್ಕೆ ನಿರ್ಬಂಧಿತರಾಗುವರು ಎಂದು ಸ್ಪಷ್ಟ ಪಡಿಸಿ"ದರು. "ಸಿ ಐ ಟಿ ಯು ಈ ಸರ್ಕಾರವನ್ನು ಬೆಂಬಲಿಸುವುದಾದರೂ ಕಾರ್ಮಿಕರ ನ್ಯಾಯವನ್ನು ಪಡೆಯುವ ಎಲ್ಲಾ ರೀತಿಯ ಹೋರಾಟಕ್ಕೂ ತಯಾರಿ" ಎಂದು ಸ್ಪಷ್ಟ ಪಡಿಸಿದರು.

"P W D ಕಾರ್ಮಿಕರಿಗೆ ಹಿಂದೆ ಸಿಗುತ್ತಿದ್ದ ಭಾನುವಾರದ ಸಂಬಳ ಕೊಡದಿರುವುದು ತೀರಾ ಅನ್ಯಾಯವೆಂದು, ಅವರ ಹೋರಾಟವನ್ನು ನ್ಯಾಯ ರೀತಿಯಲ್ಲಿ ಸರ್ಕಾರವು ಮನ್ನಣೆ ಮಾಡಲು ಮುಂದಾಗಬೇಕೆಂದು" ಕರೆ ಕೊಟ್ಟರು. ಜಯಘೋಷಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಇತಿಹಾಸ ಗೊತ್ತಿರದ ಪ್ರಧಾನಿ

[1ನೇ ಪುಟದಿಂದ]

ಗಳು ಬಹಳ ಇದ್ದರೂ ಅದನ್ನು ಕಮ್ಯುನಿಸ್ಟ್ ಪಕ್ಷಗಳು ಹಾಡಿ ಹೊಗಳಲಿಲ್ಲವಂತೆ. ಆದರಿಂದಾಗಿ ಕಮ್ಯುನಿಸ್ಟರ ಕೆಂಪು ರಕ್ತ ಬಿಳಚಿಕೊಂಡು ಬೇರೆ ಬೇರೆ ಬಣ್ಣಗಳು, (ಬಲ ಪಕ್ಷಗಳೊಡನೆ ಸೇರಿ) ಹಿಂದೆ ಜರ್ಮನಿಯಲ್ಲಾದಂತೆ ಕಂದು ಬಣ್ಣ (ನಾಜಿಗಳ ಬಣ್ಣ) ವಾಗಿದೆಯಂತೆ.

ಈ ಮಾತನ್ನು ಕೇಳಿದ ತಕ್ಷಣ ದಿಪೇನ್ ಘೋಷ್ ಹಾಗೂ ನಿರ್ಮಲ್ ಚಟರ್ಜಿ ಇಬ್ಬರೂ ಒಮ್ಮೆಲೇ ಎದ್ದು ನಿಂತರು. ಒಂದಾದಮೇಲೊಂದರಂತೆ ವಾಗ್ಬಾಣಗಳನ್ನು ಬಿಡತೊಡಗಿದರು. ಯಾರು ಕಂದು ಬಣ್ಣದವರು ಎಂಬುದು ಈ ದೇಶಕ್ಕೆ ಗೊತ್ತಾಗಿದೆ. ಬಂಗಾಳದಲ್ಲಿ ಕಾಂಗ್ರೆಸ್ (ಐ) ಅಧಿಕಾರದಲ್ಲಿದ್ದಾಗ (1971-77) ಪರಿಣತ ಕಂದು ಬಣ್ಣ ಕೊಟ್ಟು ಹಾವಳಿ ಮಾಡಿದವರು ಯಾರು ಎಂಬುದು ಬಂಗಾಳದ ಜನತೆಗಳಿಗೆ ಚೆನ್ನಾಗಿ ತಿಳಿದಿದೆ ಎಂದು ದಿಪೇನ್ ಘೋಷ್‌ರವರು ಹೇಳಿದರೆ, ನಿರ್ಮಲ ಚಟರ್ಜಿಯವರು ಯೂರೋಪಿನ ಚರಿತ್ರೆ ಬಗ್ಗೆ ಪ್ರಧಾನಿಯವರಿಗೆ ಏನೂ ಗೊತ್ತಿಲ್ಲ ಕಮ್ಯುನಿಸ್ಟರನ್ನು ನಾಶಮಾಡಲೆಂದೇ ನಾಜಿಗಳು ಹುಟ್ಟಿದ್ದು ಎಂಬುದು ಅವರಿಗೆ ತಿಳಿದಂತೆ ಕಾಣುವುದಿಲ್ಲ. ಚರಿತ್ರೆ ಗೊತ್ತಿರದ ಪ್ರಧಾನ ಮಂತ್ರಿ ನಮ್ಮ ದೇಶದಲ್ಲಿರುವುದು ನಾಚಿಗೇಡು ಎಂದು ಹಂಗಿಸಿದರು.

ಇವರಿಬ್ಬರೂ ಮಾತನಾಡುವಾಗ ಅವರಿಗೆ ಗದ್ದಲ ಮಾಡುತ್ತಾ ಮಾತನಾಡದಂತೆ ತಡೆಯಲು ಪ್ರಯತ್ನಿಸುತ್ತಿದ್ದ ಕಾಂಗ್ರೆಸ್ ಎಂಪಿಗಳನ್ನು ಉದ್ದೇಶಿಸಿ ಕಾಂ. ದಿಪೇನ್ ಘೋಷ್ ರವರು ನಿಮ್ಮ ಕಂದು ಬಣ್ಣ (ನಾಜೀತನ) ವನ್ನು ಇಲ್ಲಿ ತೋರಿಸುವುದಕ್ಕೆ ಬರಬೇಡಿ. ನಿಮ್ಮೆಲ್ಲರನ್ನು ಎದುರಿಸಲು ನಾವಿಬ್ಬರೆ ಸಾಕು ಎಂದು ಸವಾಲು ಹಾಕಿದರು.

ರಾಜೀವ್‌ಗಾಂಧಿಯವರ ಈ ಭಾಷಣ, ರಾಜ್ಯಸಭೆಯ ಇತಿಹಾಸದಲ್ಲಿಯೇ ವಿಶಿಷ್ಟವಾದದ್ದು. ಏಕೆಂದರೆ ವಿರೋಧ ಪಕ್ಷಗಳು ಮೂರು ದಿನಗಳ ಕಾಲ ಮಾಡಿದ ಸಲಹೆಗಳಿಗೆ, ಎತ್ತಿದ ಪ್ರಶ್ನೆಗಳಿಗೆ ಒಂದಕ್ಕೂ ಉತ್ತರ ಕೊಡದೆ ವಿ ಪಿ. ಸಿಂಗ್‌ರವರು ಮಾಡಿದ ಬಜೆಟ್ ಭಾಷಣವನ್ನೇ ಮತ್ತೇ ಮಾಡಿದಂತಾಗಿದೆ ಎಂದು ವಿರೋಧ ಪಕ್ಷಗಳ ನಾಯಕರುಗಳು ರಾಜೀವಗಾಂಧಿಯವರನ್ನು ಎದುರಿಸಿದರು.

Printed & Published by P. Ramachandra Rao on behalf of the Communist Party of India (Mrxist)KarnatakaState Committee, K. V. Temple Street, Sultanpet, Bangalore-560053 Editorial and managerial office, L-56, K. V. TempleStreet, Sultanpet, B-53Phone : 75331
Editor P. Ramach andra Rao Managing Editor : N K Upadhyaya